ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಫೆಬ್ರವರಿ 21, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 280 RNI : 27369/75

janathavani@mac.com
www.janathavani.com
08192 254736 91642 99999


## ಅರ್ಬನ್ ಬ್ಯಾಂಕ್ : ಕೋಗುಂಡಿ ಬಕ್ಕೇಶಪ್ಪ, ಉಮಾಪತಿ ಗುಂಪಿನ 15 ಜನರೂ ಆಯ್ಕೆ

ದಾವಣಗೆರೆ,ಫೆ.20- ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಬಿ.ಸಿ. ಉಮಾಪತಿ ಮತ್ತು ಕೋಗುಂಡಿ ಬಕ್ಕೇಶಪ್ಪ ನೇತೃತ್ವದ ಗುಂಪಿಗೆ ಭರ್ಜರಿ ಜಯ ಲಭಿಸಿದೆ.

ಬಿ.ಸಿ. ಉಮಾಪತಿ ಹಾಗೂ ಕೋಗುಂಡಿ ಬಕ್ಕೇಶಪ್ಪ ಅವರಲ್ಲದೇ, ಅವರ ಗುಂಪಿನಿಂದ ಸ್ಪರ್ಧಿಸಿದ್ದ ಎಲ್ಲಾ 15 ಜನರೂ ಜಯಶೀಲರಾಗಿದ್ದಾರೆ. 15 ಜನರಲ್ಲಿ 13 ಜನರು ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ. ಉಳಿದಿಬ್ಬರು ಹೊಸಬರಾಗಿದ್ದಾರೆ.




ಆಡಳಿತ ಮಂಡಳಿಯ ಒಟ್ಟು 15 ಸ್ಥಾನಗಳಿಗೆ ಆಯ್ಕೆ ಬಯಸಿ 23 ಜನರು ಸ್ಪರ್ಧೆ ಮಾಡಿದ್ದರು. ಇವರಲ್ಲಿ ಉಮಾಪತಿ - ಬಕ್ಕೇಶಪ್ಪ ಗುಂಪಿನ ಐವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 18 ಜನರಲ್ಲಿ ಉಮಾಪತಿ - ಬಕ್ಕೇಶಪ್ಪ ಗುಂಪಿನ ಎಲ್ಲಾ 10 ಜನರೂ ಅತ್ಯಧಿಕ ಮತಗಳನ್ನು ಗಳಿಸಿ ಆಯ್ಕೆಯಾಗಿದ್ದಾರೆ. ಉಳಿದಂತೆ, ಪ್ರತ್ಯೇಕವಾಗಿ ಸ್ಪರ್ಧಿಸಿದ್ದ 8 ಜನರು ಪರಾಭವಗೊಂಡಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಉಮಾಪತಿ - ಕೋಗುಂಡಿ ಬಕ್ಕೇಶಪ್ಪ ಗುಂಪಿನ ಬಿ.ಸಿ. ಉಮಾಪತಿ (3952), ಅಂದನೂರು ಮುಪ್ಪಣ್ಣ (3534), ದೇವರಮನೆ ಶಿವಕುಮಾರ್ (3427), ಅಜ್ಜಂಪುರ ಶೆಟ್ರು ವಿಜಯಕುಮಾರ್ (3388), ಕೋಗುಂಡಿ ಬಕ್ಕೇಶಪ್ಪ (3322), ಟಿ.ಎಸ್.ಜಯರುದ್ರೇಶ್ (3233), ಕಂಚಿಕೇರಿ ಮಹೇಶ್ (3039), ಹೆಚ್. (6ನೇ ಪುಟಕ್ಕೆ)

## ಅಸಹಕಾರದ ನಡುವೆಯೂ ಅಭಿವೃದ್ಧಿ

### ಗ್ಯಾರಂಟಿ ಯೋಜನೆ ಪರಿಣಾಮಕಾರಿ : ಸಿದ್ದರಾಮಯ್ಯ

ಬೆಂಗಳೂರು, ಫೆ. 20 - ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ರಾಜ್ಯ ಸರ್ಕಾರ ಅಭಿವೃದ್ಧಿ ಮತ್ತು ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಜಾರಿ ಹಾಗೂ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿ, ಬಿಜೆಪಿ, ಕೇಂದ್ರ ಹಾಗೂ ಮೋದಿ ಅವರನ್ನು ತಮ್ಮ ಭಾಷಣದುದ್ದಕ್ಕೂ ತರಾಟೆಗೆ ತೆಗೆದುಕೊಂಡರು.

ಮೋದಿ ಸರ್ಕಾರ ರೈತರ, ದಲಿತರ, ಬಡವರ, ಅಲ್ಪಸಂಖ್ಯಾತರ, ಮಹಿಳೆಯರ, ಕಾರ್ಮಿಕರ, ಸಂವಿಧಾನ ವಿರೋಧಿಯಾಗಿದೆ ಎಂದರು ಆರೋಪಿಸಿದರು.

ರಾಜ್ಯದ ಬಹುತೇಕ ಭಾಗ ಬರಕ್ಕೆ ಸಿಲುಕಿದ್ದರೂ ಕೇಂದ್ರ ಸರ್ಕಾರ ಇದುವರೆಗೂ ಒಂದು ಪೈಸೆ ನೀಡಿಲ್ಲ. ಈ ಸಂಬಂಧ ಕೇಂದ್ರ ಸಚಿವರನ್ನು ಎರಡು ಬಾರಿ ಭೇಟಿ ಮಾಡಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ನಮ್ಮ ಪತ್ರಗಳಿಗೆ ಅವರಿಂದ ಸ್ಪಂದನೆಯೇ ಇಲ್ಲ ಎಂದು ಆರೋಪಿಸಿದರು.

ಇಂತಹ ಸರ್ಕಾರವನ್ನು ಏನೆಂದು ಕರೆಯಲು ಸಾಧ್ಯ? ಜನರಿಗೆ ಸಂವಿಧಾನದ ಜಾಗೃತಿ ಮೂಡಿಸಿ, ಕೆಲವರ ಕೊಳಕುತನವನ್ನು ಬಹಿರಂಗ ಮಾಡಲು ಜಾಗೃತಿ ಯಾತ್ರೆ ಆರಂಭಿಸಿದ್ದೇವೆ ಎಂದರು.

ನಾವು ಮನು ವಾದದಲ್ಲಿ ನಂಬಿಕೆ ಇಟ್ಟಿಲ್ಲ, ಸಂವಿಧಾನದಲ್ಲಿ ನಂಬಿಕೆ ಇಟ್ಟಿರುವವರು, ಸರ್ವ ಜನಾಂಗದ ಶಾಂತಿಯ ತೋಟ ಎಂಬ ಮಾತಲ್ಲಿ ನಾವು ನಂಬಿಕೆ ಇರಿಸಿದ್ದೇವೆ. ಆದ್ದರಿಂದ ಎಲ್ಲಾ ವರ್ಗಗಳಿಗೆ ಶಕ್ತಿ ನೀಡಲು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೇವಲ 9 ತಿಂಗಳಲ್ಲಿ 77 ಸಾವಿರ ಕೋಟಿ ರೂ. ಹೂಡಿಕೆ ಬಂದಿರುವುದೇ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುಗಮವಾಗಿರುವುದಕ್ಕೆ ಸಾಕ್ಷಿ ಎಂದರು.

ಬಿಜೆಪಿ ಎಂದರೆ ಸುಳ್ಳು, ಸುಳ್ಳಿನ ಉತ್ಪಾದನೆಯಲ್ಲಿ ಬಿಜೆಪಿ ನಿಸ್ಸೀಮರು, ಅಭಿವೃದ್ಧಿ ಮರೆತು ಸುಳ್ಳುಗಳ ಆಸರೆ (4ನೇ ಪುಟಕ್ಕೆ)

### ಶ್ರೀಮಂತರಿಂದ ತೆರಿಗೆ, ಬಡವರಿಗೆ ಆರ್ಥಿಕ ಶಕ್ತಿ



**ಶ್ರೀಮಂತರಿಂದ ತೆರಿಗೆಯನ್ನು ಕಾನೂನು ರೀತಿ ಸಂಗ್ರಹಿಸಿ, ಬಡವರಿಗೆ ಆರ್ಥಿಕ - ಸಾಮಾಜಿಕ ಶಕ್ತಿ ತುಂಬುತ್ತಿರುವುದು ಉತ್ತಮ ಆರ್ಥಿಕತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.**

**ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸುತ್ತಿದ್ದ ಅವರು, ನಾನು ಈ ಉತ್ತಮ ಆರ್ಥಿಕತೆಯಲ್ಲಿ ನಂಬಿಕೆಯಿಟ್ಟಿರುವವನು. ಈ ಉದ್ದೇಶದಿಂದ ಮುಂದಿನ ವರ್ಷಕ್ಕೆ ಗ್ಯಾರಂಟಿಗಳಿಗೆ ರೂ.52,009 ಕೋಟಿ ಮೀಸಲಿಟ್ಟಿದ್ದೇವೆ ಎಂದರು.**

## ಹೆದ್ದಾರಿಯಲ್ಲಿ ಟ್ರ್ಯಾಕ್ಟರ್ ಚಲಾಯಿಸುವಂತಿಲ್ಲ

ಚಂಡೀಘಡ, ಫೆ. 20 – ಮೋಟಾರು ವಾಹನ ಕಾಯ್ದೆಯ ಅನ್ವಯ ಟ್ರ್ಯಾಕ್ಟರ್ - ಟ್ರ್ಯಾಲಿಗಳನ್ನು ಹೆದ್ದಾರಿ ಮೇಲೆ ಚಲಾಯಿಸುವಂತಿಲ್ಲ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೇಳಿದೆ.


ದೊಡ್ಡ ಸಂಖ್ಯೆಯಲ್ಲಿ ಪಂಜಾಬ್ ರೈತರು ಟ್ರ್ಯಾಕ್ಟರ್‌ಗಳಲ್ಲಿ ದೆಹಲಿ ಕಡೆ ತೆರಳುತ್ತಿರುವ ಹಿನ್ನೆಲೆಯಲ್ಲಿ ಈ ಟಿಪ್ಪಣಿ ಮಾಡಿರುವ ಹೈಕೋರ್ಟ್, ರೈತರು ಬಸ್ ಇಲ್ಲವೇ ಸಾರ್ವಜನಿಕ ಸಾರಿಗೆ ಮೂಲಕ ದೆಹಲಿ ಕಡೆ ತೆರಳುವಂತೆ ಹೇಳಿದೆ.

ಪಂಜಾಬ್ ಸರ್ಕಾರ ದೊಡ್ಡ ಸಂಖ್ಯೆಯಲ್ಲಿ ರೈತರು ಸೇರಲು ಅವಕಾಶ ನೀಡಬಾರದು ಎಂದೂ ಹೈಕೋರ್ಟ್ (2ನೇ ಪುಟಕ್ಕೆ)

## ಎಸ್ಸೆಸ್ಸೆಲ್ಸಿ-ಪಿಯುಸಿ ವೇಳಾಪಟ್ಟಿ ಪ್ರಕಟ

### ಲೋಕಸಭಾ ಚುನಾವಣೆ ಹಿನ್ನೆಲೆ: ಏ.6ರ ಒಳಗೆ ಪರೀಕ್ಷೆ ಪೂರ್ಣ

ಬೆಂಗಳೂರು, ಫೆ. 20 - ಲೋಕಸಭಾ ಚುನಾವಣಾ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಏಪ್ರಿಲ್ 6 ರೊಳಗೆ ಪೂರ್ಣಗೊಳಿಸಲು ಸರ್ಕಾರ ಅಂತಿಮ ವೇಳಾಪಟ್ಟಿ ಪ್ರಕಟಿಸಿದೆ.



ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿಯಲ್ಲಿಂದು ವೇಳಾ ಪಟ್ಟಿ ಪ್ರಕಟಿಸಿ, ನ್ಯಾಯಾಲಯದ ನಿರ್ದೇಶನದಂತೆ ಸಮವಸ್ತ್ರ ನಿಯಮ ಪಾಲನೆ ಮಾಡುವುದಾಗಿ ಸ್ಪಷ್ಟಪಡಿಸಿದರು.

ದ್ವಿತೀಯ ಪಿಯುಸಿ ಪರೀಕ್ಷೆ ಮಾರ್ಚ್ 1 ರಿಂದ 22 ರವರೆಗೆ, ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾರ್ಚ್ (4ನೇ ಪುಟಕ್ಕೆ)

Davanagere Weather
34° 19°

## ಮರಾಠಕ್ಕೆ ಮೀಸಲು

ಮುಂಬೈ, ಫೆ. 20 - ಮರಾಠ ಸಮುದಾಯಕ್ಕೆ ಶೇ.10ರಷ್ಟು ಮೀಸ ಲಾತಿ ಕಲ್ಪಿಸುವ ಮಸೂದೆಗೆ ಮಹಾರಾಷ್ಟ್ರ ವಿಧಾನಸಭೆ ಸರ್ವಸಮ್ಮತಿಯ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಏಕನಾಥ ಶಿಂಧೆ (4ನೇ ಪುಟಕ್ಕೆ)


SUCCESS is Not Final : FAILURE is not fatal :
It is the COURAGE to Continue that COUNTS



BEST WISHES
Smt. SHASHIKALA E R
PRESIDENT

GRADE 10th - AISSE
21st FEBRUARY to MARCH 11th 2024
CBSE
BEST OF LUCK
ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಶುಭವಾಗಲಿ, ಯಶಸ್ಸು ನಿಮ್ಮದಾಗಲಿ.

REGISTRATION OPENS FOR PRE-PRIMARY TO PUC

Yogiram
SHASHI Education Trust (R)


LALITHA INTERNATIONAL PUBLIC SCHOOL
LALITHA PRE UNIVERSITY COLLEGE
#67/1, Lokikere main Road, Davanagere - 577005
LALITHA MOM KIDS JAYANAGARA, DAVANAGERE - 577004.
CONTACT : 7022005826 / 7022004109 / 9980629965



## ಹೃದಯಪೂರ್ವಕ ಕೃತಜ್ಞತೆಗಳು

ಮಾನ್ಯ ಮತದಾರ ಬಾಂಧವರೇ,

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 11.2.2024 ರಂದು ನಡೆದಿದ್ದು, ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ನನಗೆ ಮತದಾನ ಮಾಡಿ ಚುನಾವಣೆ ಸಂದರ್ಭದಲ್ಲಿ ನನ್ನೊಂದಿಗೆ ಹಗಲಿರುಳು ಶ್ರಮಿಸಿದ ಗುರು-ಹಿರಿಯರಿಗೂ, ಸ್ನೇಹಿತರಿಗೂ, ಬಂಧುಗಳಿಗೂ, ವ್ಯಾಪಾರಸ್ಥರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು. ನಿಮ್ಮೆಲ್ಲರ ಆಶೀರ್ವಾದ, ಹಾರೈಕೆಯಿಂದ 2,251 ಮತಗಳನ್ನು ಪಡೆದಿದ್ದು, ಸೋಲೇ ಗೆಲುವಿಗೆ ಮುನ್ನಡೆ ಎಂಬ ಧ್ಯೇಯದೊಂದಿಗೆ ನಿಮ್ಮಗಳ ವಿಶ್ವಾಸಕ್ಕೆ ಚಿರಋಣಿಯಾಗಿದ್ದೇನೆ.



ಜಯಪ್ರಕಾಶ್ ಎಂ.ವಿ. (ಜಯಪ್ರಕಾಶ್ ಮಾಗಿ)


ಮಾಲೀಕರು, ಹರ್ಷ ಕಮರ್ಷಿಯಲ್ಸ್, ಜೆ.ಪಿ. ಎಂಟರ್ ಪ್ರೈಸಸ್, ರೈಸ್ ಕಾರ್ನರ್
ನಿರ್ದೇಶಕರು, ದಾವಣಗೆರೆ ಜಿಲ್ಲಾ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷರು,
ಚೌಕಿಪೇಟೆ ಅಕ್ಕಿ ವರ್ತಕರ ಸಂಘ, ದಾವಣಗೆರೆ. ಹಿಂದೂ ಮಹಾಗಣಪತಿ ಟ್ರಸ್ಟಿ, ದಾವಣಗೆರೆ.
ಉಪಾಧ್ಯಕ್ಷರು, ಬನ್ನಿ ಮಹಾಕಾಳಿ ಸೇವಾ ಸಮಿತಿ, ದೇವರಾಜ ಅರಸು ಬಡಾವಣೆ
ಹಾಗೂ ಶಬರಿಗಿರೀಶ ಸೇವಾ ಸಮಿತಿ (ರಿ.) ಶಿವಾಲಿ ರಸ್ತೆ. ಮೊ - 94498 07696, 72594 07696
ಪರಾಜಿತ ಅಭ್ಯರ್ಥಿ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.


## ಸೋನಿಯಾ, ನಡ್ಡಾ ಅವಿರೋಧ ಆಯ್ಕೆ




ನವದೆಹಲಿ, ಫೆ. 20 – ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ 41 ಜನರು ರಾಜ್ಯಸಭೆಗೆ ಅವಿರೋಧ ವಾಗಿ ಆಯ್ಕೆಯಾಗಿದ್ದಾರೆ. ಕರ್ನಾ ಟಕ, ಹಿಮಾಚಲ ಪ್ರದೇಶ ಹಾಗೂ ಉತ್ತರ ಪ್ರದೇಶಗಳ ವಿಧಾನಸಭೆಗಳಿಂದ ರಾಜ್ಯಸಭೆಗೆ ಆಯ್ಕೆಯಾಗಲು ಫೆಬ್ರವರಿ 27ರಂದು (4ನೇ ಪುಟಕ್ಕೆ)

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 20-02-2024ರ ಮಂಗಳವಾರದಂದು ನಿಧನರಾದ ಜೆಜೆಎಂ ಮೆಡಿಕಲ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರೂ, ನಗರದ ಹೆಸರಾಂತ ಹೃದಯ ತಜ್ಞರೂ ಮತ್ತು ನಮ್ಮ ಕೇಂದ್ರದ ಸಂಸ್ಥಾಪಕ ಕಾರ್ಯದರ್ಶಿ ಹಾಗೂ ಮಾಜಿ ಅಧ್ಯಕ್ಷರೂ ಆದ

**ಡಾ|| ಶಶಿಧರ ಆರ್. ಮರಳೀಹಳ್ಳಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ನೀಡಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಳಿ ಸದಸ್ಯರು ಹಾಗೂ ಸರ್ವ ಸದಸ್ಯರು
**ದಾವಣಗೆರೆ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್, ವಿದ್ಯಾನಗರ, ದಾವಣಗೆರೆ.**

## ಹೆಸರಾಂತ ವೈದ್ಯರಾದ ಡಾ|| ಶಶಿಧರ ಆರ್. ಮರಳಿಹಳ್ಳಿ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್, ಸತ್ಸಂಗ ರಸ್ತೆ ವಾಸಿ, ಜೆಜೆಎಂ ಮೆಡಿಕಲ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರೂ, ನಗರದ ಹೆಸರಾಂತ ಹೃದಯ ತಜ್ಞರೂ ಆದ

**ಡಾ|| ಶಶಿಧರ ಆರ್. ಮರಳೀಹಳ್ಳಿ** ಇವರು

ದಿನಾಂಕ 20-02-2024ರ ಮಂಗಳವಾರ ರಾತ್ರಿ 9.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು.
ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21-02-2024ರ ಬುಧವಾರ ಮಧ್ಯಾಹ್ನ 1.00 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. : 98860 89999, 99725 99009

## ಮಕ್ಕಳ ತಜ್ಞರಾದ ಡಾ|| ಜಿ. ಗುರುಪ್ರಸಾದ್ ಅವರ ಸಹೋದರ

## ದಂತ ವೈದ್ಯ ಡಾ|| ಜಿ. ಶಿವಪ್ರಕಾಶ್ ನಿಧನ



ದಾವಣಗೆರೆಯ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್‌ನ ಆರ್ಥೋಡಾಂಟಿಕ್ಸ್ ವಿಭಾಗದ ನಿವೃತ್ತ ಮುಖ್ಯಸ್ಥರೂ, ಹಿರಿಯ ದಂತ ವೈದ್ಯರೂ ಆದ

**ಡಾ|| ಜಿ. ಶಿವಪ್ರಕಾಶ್** ಅವರು

(ನಿವೃತ್ತ ಕಾರ್ಯಪಾಲಕ ಅಭಿಯಂತರರಾಗಿದ್ದ ದಿ|| ಶ್ರೀ ಜಯದೇವಪ್ಪ ಮತ್ತು ದಿ|| ಶ್ರೀಮತಿ ಚನ್ನಮ್ಮ ದಂಪತಿ ಪುತ್ರ)

ದಿನಾಂಕ 20-02-2024ರ ಮಂಗಳವಾರ ಸಂಜೆ 6.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 59 ವರ್ಷ ವಯಸ್ಸಾಗಿತ್ತು.
ಡಾ|| ಜಿ. ಶಿವಪ್ರಕಾಶ್, ಮಕ್ಕಳ ತಜ್ಞರಾದ ಡಾ|| ಜಿ. ಗುರುಪ್ರಸಾದ್ ಅವರ ಸಹೋದರ.
ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಡಾ|| ಶಿವಪ್ರಕಾಶ್ ಅವರ ಪಾರ್ಥಿವ ಶರೀರವನ್ನು ದಿನಾಂಕ 21-2-2024ರ ಬುಧವಾರ ಮಧ್ಯಾಹ್ನ 12 ರವರೆಗೆ ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ 'ವೇದಾ ಡೆಂಟಲ್ ಕ್ಲಿನಿಕ್'ನಲ್ಲಿ ಇರಿಸಲಾಗುವುದು. ನಂತರ ಮಧ್ಯಾಹ್ನ 2 ಗಂಟೆಗೆ ಬೆಳವನೂರು 6ನೇ ಮೈಲಿಕಲ್ ಹತ್ತಿರವಿರುವ 'ಜಯದೇವ ಫಾರ್ಮ್'ನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. : 98440 65889

## ಬೆಳ್ಳೂಡಿಯಲ್ಲಿ ನಾಳೆ ಗ್ರಾಮದೇವತೆ ಉಡಸಲಾಂಭಿಕೆ ದೇವಿ ದೇವಸ್ಥಾನದ ಉದ್ಘಾಟನೆ




ಹರಿಹರ, ಫೆ.20- ನಗರದ ಹೊರವಲಯದ ಬೆಳ್ಳೂಡಿ ಗ್ರಾಮದಲ್ಲಿ ನಾಡಿದ್ದು ದಿನಾಂಕ 22 ಮತ್ತು 23 ರಂದು ಗ್ರಾಮದೇವತೆ ಉಡಸಲಾಂಭಿಕೆ ದೇವಿ ದೇವಸ್ಥಾನ ಉದ್ಘಾಟನೆ ಮತ್ತು ದೇವಿ ಪ್ರಾಣ ಪತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಉಡಸಲಾಂಭಿಕಾದೇವಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಮರುಳಸಿದ್ದಯ್ಯ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ದಿನಾಂಕ 22ರ ಗುರುವಾರ ದೇವಿಗೆ ವಿಶೇಷ ಪೂಜೆಗಳು ಜರುಗಲಿವೆ.

ದಿನಾಂಕ 23 ರಂದು ಶುಕ್ರವಾರ ಬೆಳಗ್ಗೆ ನಾಗದೇವರ ಮೂರ್ತಿ ಮತ್ತು ಉಡಸಲಾಂಭಿಕಾ ದೇವಿಯ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನಂತರ ವೇದಿಕೆ ಸಮಾರಂಭ ನಡೆಯಲಿದ್ದು, ದಿವ್ಯಸಾನ್ನಿಧ್ಯವನ್ನು ಸಿರಿಗೆರೆ ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಕಾಗಿನಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗಡೆ, ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಅಂಬಿಗರ ಚೌಡಯ್ಯ ಪೀಠದ ಜಗದ್ಗುರು ಶ್ರೀ ನಿಜಶರಣ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಮಡಿವಾಳ ಮಾಚಿದೇವ ಸ್ವಾಮೀಜಿ, ಚಿತ್ರದುರ್ಗ ಮಾದಾರ ಚೆನ್ನಯ ಸ್ವಾಮೀಜಿ, ಕೊಪ್ಪಳ ಅಭಿನಯ ಗವಿಸಿದ್ದೇಶ್ವರ ಸ್ವಾಮೀಜಿ, ತಂಗಡಗಿ ಅನ್ನದಾನಿ ಹಡಪದ ಅಪ್ಪಣ್ಣ ಸ್ವಾಮೀಜಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೇವಸ್ಥಾನ ಸಮಿತಿಯ ಅಧ್ಯಕ್ಷ ಮರುಳಸಿದ್ದಯ್ಯ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ.ಸಿದ್ದೇಶ್ವರ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಎಸ್.ರಾಮಪ್ಪ, ಹೆಚ್.ಎಸ್. ಶಿವಶಂಕರ್, ಮಾಜಿ ಸಚಿವ ಪ್ರಮೋದ್ ಮದ್ವರಾಜ್ ಸೇರಿದಂತೆ ಹಲವಾರು ಮುಖಂಡರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ಹನುಮಂತಗೌಡ್ರು, ಜಿ.ಎಸ್. ಸುದೀಪ್ ಗೌಡ್ರು, ಬಾತಿ ಮಹೇಶ್ವರಪ್ಪ, ವಿರೂಪಾಕ್ಷಪ್ಪ ದೊಡ್ಡ ಬಾರಿಕರ, ಜಿ.ಎಸ್. ಸಿದ್ದಪ್ಪ, ಕೆ.ಜಿ.ಉಮೇಶ್, ಪೂಜಾರ್ ಶಂಕರಪ್ಪ, ಕೆ.ಎಸ್. ಜಗದೀಶ್ ಇತರರು ಹಾಜರಿದ್ದರು.

## ಹೆದ್ದಾರಿಯಲ್ಲಿ ಟ್ರ್ಯಾಕ್ಟರ್ ಚಲಾಯಿಸುವಂತಿಲ್ಲ

(1ನೇ ಪುಟದಿಂದ) ಮೌಖಿಕವಾಗಿ ತಿಳಿಸಿದೆ. ದೆಹಲಿ ಚಲೋ ಅಭಿಯಾನದ ಅಂಗವಾಗಿ ದೊಡ್ಡ ಸಂಖ್ಯೆಯಲ್ಲಿ ರೈತರು ಪಂಜಾಬ್ - ಹರಿಯಾಣ ಗಡಿಯಲ್ಲಿ ನೆರೆದಿ ದ್ದಾರೆ. ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ಹಲವಾರು ಬೇಡಿಕೆ ಗಳನ್ನು ಮುಂದಿಟ್ಟು ಕೊಂಡು ರೈತರು ದೆಹಲಿ ಕಡೆ ತೆರಳಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ರೈತರು ಸೇರಲು ಅವಕಾಶ ನೀಡಬಾರದು ಎಂದು ಪಂಜಾಬ್ ಸರ್ಕಾರಕ್ಕೆ ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳಾದ ಜಿ.ಎಸ್. ಸಂಧವಾಲಿಯ ಹಾಗೂ ನ್ಯಾಯಮೂರ್ತಿ ಲಪಿತಾ ಬ್ಯಾನರ್ಜಿ ಅವರನ್ನು ಒಳಗೊಂಡ ಪೀಠ ಮೌಖಿಕವಾಗಿ ತಿಳಿಸಿದೆ.

ಹರಿಯಾಣ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ದೀಪಕ್ ಸಭ್ರವಾಲ್, ಮೋಟಾರು ವಾಹನ ಕಾಯ್ದೆಯ ಅನ್ವಯ ರೈತರು ಟ್ರ್ಯಾಕ್ಟರ್ ಹಾಗೂ ಟ್ರಾಲಿಗಳನ್ನು ಹೆದ್ದಾರಿಗಳಲ್ಲಿ ಬಳಸುವಂತಿಲ್ಲ ಎಂದು ಹೇಳಿದರು.

ರೈತರು ದೆಹಲಿ ಕಡೆ ತೆರಳಲು ಬಸ್ ಇಲ್ಲವೇ ಸಾರಿಗೆ ವಾಹನ ಬಳಸಬಹುದು ಎಂದು ನ್ಯಾಯಾಲಯ ಮೌಖಿಕವಾಗಿ ಅಭಿಪ್ರಾಯ ಪಟ್ಟಿತು.

ರೈತ ಮುಖಂಡರು ಹಾಗೂ ಕೇಂದ್ರ ಸಚಿವರ ಸಮಿತಿ ನಡುವೆ ನಡೆದ ಸಭೆಯ ವಿವರಗಳನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸುವಂತೆಯೂ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ತಿಳಿಸಿದೆ.

ರೈತರು ಪ್ರತಿಭಟನೆಗಾಗಿ ದೆಹಲಿಗೆ ಬರದಂತೆ ತಡೆಯಲು ಹರಿಯಾಣ, ಪಂಜಾಬ್ ಹಾಗೂ ಕೇಂದ್ರ ಸರ್ಕಾರಗಳು ನಿರ್ಮಿಸಿರುವ ಅಡ್ಡಿಗಳನ್ನು ತೆರವುಗೊಳಿಸಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿತ್ತು.

ಪ್ರತಿಭಟನಾಕಾರರು ಹೆದ್ದಾರಿ ತಡೆಯದಂತೆ ಹಾಗೂ ರಸ್ತೆ ತಡೆ ನಡೆಸುವವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮತ್ತೊಂದು ಅರ್ಜಿ ದಾಖಲಿಸಲಾಗಿತ್ತು. ನ್ಯಾಯಾಲಯ ಅರ್ಜಿಗಳ ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿದೆ.

## ಬೇಡಿಕೆ ಈಡೇರಿಕೆ ಭರವಸೆ : ಧರಣಿ ಕೈಬಿಟ್ಟ ಕದಸಂಸ ಕಾರ್ಯಕರ್ತರು



**ಹರಿಹರ**

ಹರಿಹರ, ಫೆ. 20- ನಿಯಮಾವಳಿ ಪ್ರಕಾರ ಪ್ರಕ್ರಿಯೆ ನಡೆದು ಪ್ರಸ್ತಾವನೆ ಬಂದಲ್ಲಿ ತಾಲ್ಲೂಕಿನ ಕಡ್ಲೆಗೊಂದಿ ಹಾಗೂ ಭಾನುವಳ್ಳಿ ಗ್ರಾಮಗಳ ನಿರ್ವಸತಿಗರಿಗೆ ವಸತಿ ಯೋಜನೆ ಕಲ್ಪಿಸಲು ಸಾಧ್ಯವಾಗುತ್ತದೆ ಎಂದು ತಾ.ಪಂ. ಇಒ ರಮೇಶ್ ಸುಲ್ಫಿ ಹೇಳಿದರು.

ನಗರದ ತಾಲ್ಲೂಕು ಕಚೇರಿ ಮುಂಭಾಗ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ನೇತೃತ್ವದಲ್ಲಿ ಕಳೆದ 57 ದಿನಗಳಿಂದ ಈ ಎರಡೂ ಗ್ರಾಮಗಳ ದಲಿತ ಹಾಗೂ ಹಿಂದುಳಿದ ವರ್ಗಗಳ ನಿರ್ವಸತಿಗರು ನಡೆಸುತ್ತಿರುವ ಧರಣಿ ಸ್ಥಳಕ್ಕೆ ಮಂಗಳವಾರ ಆಗಮಿಸಿ ಮಾತನಾಡಿದರು.

ಗ್ರಾ.ಪಂ.ಯಿಂದ ನಿರ್ವಸತಿಗರ ಫಲಾನುಭವಿಗಳ ಪಟ್ಟಿ ರಚಿಸಿ ತಾ.ಪಂ.ಗೆ ಕಳಿಸಬೇಕು, ನಂತರದಲ್ಲಿ ಜಾಗದ ಲಭ್ಯತೆ ಪರಿಶೀಲಿಸಿ ವಸತಿ ಯೋಜನೆ ಜಾರಿಗೊಳಿಸುವ ಬಗ್ಗೆ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳಲಾಗುತ್ತದೆ ಎಂದರು.

ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಸುದೀರ್ಘ ಅವಧಿವರೆಗೆ ಕದಸಂಸ ನೇತೃತ್ವದಲ್ಲಿ ಎರಡೂ ಗ್ರಾಮಗಳ ನಿರ್ವಸತಿಗರು ವಿಶೇಷವಾಗಿ ಮಹಿಳೆಯರು, ಮಕ್ಕಳೂ ಕೂಡ ಗಣನೀಯ ಸಂಖ್ಯೆಯಲ್ಲಿ ಧರಣಿ ಕುಳಿತಿರುವುದು ನೋಡಿದರೆ ಇವರಿಗೆ ನಿಜವಾಗಿಯೂ ವಸತಿ ಸಮಸ್ಯೆ ಇದೆ ಎಂಬುದನ್ನು ಅರಿಯಬಹುದಾಗಿದೆ ಎಂದು ಹೇಳಿದರು.

ಈಗಾಗಲೇ ಪ್ರತಿಭಟನಾಕಾರರು ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಜನಸ್ಪಂದನಾ ಕಾರ್ಯಕ್ರಮದಲ್ಲಿ ಹಾಗೂ ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಕಂದಾಯ ಸಚಿವ ಕೃಷ್ಣಭೈರೇಗೌಡರಿಗೆ ಮನವಿ ನೀಡಿದ್ದಾರೆ. ಸ್ಥಳೀಯ ಅಧಿಕಾರಿಗಳು ಕಾಳಜಿಯಿಂದ ಇವರ ಬೇಡಿಕೆಯನ್ನು ಪರಿಶೀಲಿಸಿ, ಸೂರಿನ ವ್ಯವಸ್ಥೆ ಮಾಡಬೇಕು, ಸದ್ಯಕ್ಕೆ ಪ್ರತಿಭಟನೆಯನ್ನು ಕೈಬಿಡಿ ಎಂದು ಕೋರಿದರು.

ಕದಸಂಸ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, ಹಿರಿಯರು ಹಾಗೂ ಅಧಿಕಾರಿಗಳ ಸಲಹೆ ಯಂತೆ ತಾತ್ಕಾಲಿಕವಾಗಿ ಧರಣಿಯನ್ನು ಕೈಬಿಡುತ್ತೇವೆ. ಈ ಎರಡೂ ಗ್ರಾಮಗಳ ಬಡ ಗ್ರಾಮಸ್ಥರ ಬೇಡಿಕೆ ಈಡೇರದಿದ್ದರೆ ಮತ್ತೆ ಹೋರಾಟ ಆರಂಭಿಸಲಾಗುವುದೆಂದರು.

ತಹಶೀಲ್ದಾರ್ ಗುರುಬಸವರಾಜ್, ಸಿಪಿಐ ಸುರೇಶ್ ಹಗರಿ, ಕಡ್ಲೆಗೊಂದಿ ಗ್ರಾಪಂ ಸದಸ್ಯೆ ಮಾತೆಂಗೆಮ್ಮ ತಿಮ್ಮಣ್ಣ, ಹನುಮಂತಪ್ಪ ಎಸ್.ಟಿ., ಶೈಲೂ ಬಿ., ಸಂಜೂ, ಹಾಲಮ್ಮ, ಪವಿತ್ರ, ಭಾನುವಳ್ಳಿಯ ಲಕ್ಷ್ಮಣ, ಪುಷ್ಪಮ್ಮ, ಭಾಗ್ಯಮ್ಮ, ಮಲ್ಲಮ್ಮ, ಮಾಗೋಡು ಹನುಮಕ್ಕ, ರತ್ನಮ್ಮ ಹಾಗೂ ಇತರರಿದ್ದರು.

## ರೈಲ್ವೆ ಸಾರಿಗೆ ಸುರಂಗ ಉದ್ಘಾಟನೆ

ಶ್ರೀಗನರ, ಫೆ. 20 – ದೇಶದ ಅತಿ ದೊಡ್ಡ ರೈಲ್ವೆ ಸಾರಿಗೆ ಸುರಂಗವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಉಧಾಂಪುರ – ಶ್ರೀನಗರ – ಬಾರಾಮುಲ್ಲಾ ರೈಲು ಮಾರ್ಗವನ್ನು ಉದ್ಘಾಟಿಸಲಾಗಿದ್ದು, ಇದು ಕಾಶ್ಮೀರದ ಮೊದಲ ವಿದ್ಯುತ್ ರೈಲು ಮಾರ್ಗವಾಗಿದೆ.

ಪ್ರಧಾನಿ ಮೋದಿ ಅವರು ಉದ್ಘಾಟನಾ ಸಮಾರಂಭದ ವೇಳೆ ಜಮ್ಮುವಿನಲ್ಲಿ ಉಪಸ್ಥಿತರಿದ್ದರು. ಏಕಕಾಲಕ್ಕೆ ಶ್ರೀನಗರ ಹಾಗೂ ಸಂಗಲ್ದನ್‌ಗಳಿಂದ ಎರಡು ರೈಲುಗಳಿಗೆ ಚಾಲನೆ ನೀಡಲಾಯಿತು.

ಇದೇ ವೇಳೆ ಪ್ರಧಾನಿ ಮೋದಿ ಅವರು ಬನಿಹಾಲ್ - ಲಂಗಲ್ದನ್ ವಲಯದ 48.1 ಕಿ.ಮೀ. ಮಾರ್ಗವನ್ನು ಉದ್ಘಾಟಿಸಿದ್ದಾರೆ. ಈ ಮಾರ್ಗದಲ್ಲಿ 12.77 ಕಿ.ಮೀ. ಉದ್ದದ ಸುರಂಗ ಬರುತ್ತದೆ. ಇದು ಖರಿ - ಸುಂಬರ್ ವಲಯದಲ್ಲಿದೆ.

ಈ ಯೋಜನೆಯ ಕಾರಣದಿಂದಾಗಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ರೈಲು ಸಂಪರ್ಕ ಕಲ್ಪಿಸುವ ಸಾಧನೆಯ ಹತ್ತಿರ ತಲುಪಿದಂತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿ ಚಿನಾಬ್ ನದಿಗೆ ಅಡ್ಡವಾಗಿ ನಿರ್ಮಿಸಿರುವ ವಿಶ್ವದ ಅತಿ ದೊಡ್ಡ ರೈಲ್ವೆ ಸೇತುವೆ ಹಾಗೂ ಭಾರತೀಯ ರೈಲ್ವೆಯ ಮೊದಲ ಕೇಬಲ್ ಸೇತುವೆಯಾದ ಅಂಜಿ ಬ್ರಿಡ್ಜ್ ಉದ್ಘಾಟನೆಯಾಗಲಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.



**ಕಬಡ್ಡಿ...ಕಬಡ್ಡಿ...!** ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದ ಅಂಗವಾಗಿ ನಡೆದ ಕಬಡ್ಡಿ ಕ್ರೀಡೆಯಲ್ಲಿ ಗೆಲುವಿಗೆ ಸಾಣಸಾಡುತ್ತಿರುವ ಸ್ಪರ್ಧಿಗಳು.

## ಜಗಳೂರಿನಲ್ಲಿ 'ಸರ್ವಜ್ಞನ ಜಯಂತ್ಯುತ್ಸವ'



ಜಗಳೂರು. ಫೆ.20- 'ತ್ರಿಪದಿ ಬ್ರಹ್ಮ' ಎಂದು ಖ್ಯಾತಿ ಪಡೆದು, ವಚನಗಳ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದಿದ ಸರ್ವಜ್ಞ ಕವಿಯ ಜಯಂತ್ಯುತ್ಸವವನ್ನು ತಾಲ್ಲೂಕು ಆಡಳಿತದಿಂದ ತಾಲ್ಲೂಕು ಕಚೇರಿಯಲ್ಲಿ ಸರಳವಾಗಿ ಆಚರಿಸಲಾಯಿತು. ತಹಶೀಲ್ದಾರ್ ಚಂದ್ರಶೇಖರ್ ನಾಯ್ಕ, ಗ್ರೇಡ್ 2 ತಹಶೀಲ್ದಾರ್ ಜಿ.ಕೆ.ಮಂಜಾನಂದ, ಕಾಂಗ್ರೆಸ್ ರಾಜ್ಯ ಎಸ್.ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಪಿ.ಎಲ್.ಡಿ ಬ್ಯಾಂಕ್ ಸದಸ್ಯೆ ಚೌಡಮ್ಮ, ಪತ್ರಕರ್ತ ಮಹಾಂತೇಶ್ ಬ್ರಹ್ಮ ಮತ್ತು ಇತರರು ಭಾಗವಹಿಸಿದ್ದರು.

## ವಾಲ್ಮೀಕಿ ಮಹಾದ್ವಾರ ತೆರವುಗೊಳಿಸಲು ಬಿಡುವುದಿಲ್ಲ




**ಎಚ್ಚರಿಕೆ**

ಹರಿಹರ, ಫೆ.20- ಭಾನುವಳ್ಳಿ ಗ್ರಾಮದಲ್ಲಿ ಹಾಲಮತ ಸಮಾಜದವರು ವಾಲ್ಮೀಕಿ ಮಾಹಾದ್ವಾರವನ್ನು ಮತ್ತು ನಾಮಫಲಕ ತೆರವುಗೊಳಿಸಲು ಸರ್ಕಾರಕ್ಕೆ ಹತ್ತು ದಿನಗಳ ಕಾಲ ಗಡುವು ನೀಡಿದ್ದು, ನಮ್ಮ ಪ್ರಾಣವನ್ನು ಅರ್ಪಣೆ ಮಾಡಿಯಾದರು ವಾಲ್ಮೀಕಿ ಮಹಾದ್ವಾರ ಮತ್ತು ನಾಮಫಲಕ ವನ್ನು ತೆರವುಗೊಳಿಸುವುದಕ್ಕೆ ಬಿಡುವುದಿಲ್ಲ ಎಂದು ವಾಲ್ಮೀಕಿ ಸಮಾಜದ ಮುಖಂಡರಾದ ಭಾನುವಳ್ಳಿ ಟಿ. ಪುಟ್ಟಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಪಾರ್ವತಮ್ಮ, ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಜಿಗಳಿ ಕೆ.ಆರ್. ರಂಗಪ್ಪ, ಎಸ್.ಪಿ. ಮೋಹನ್ ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಗ್ರಾಮ ಪಂಚಾಯತಿ ವ್ಯಾಪ್ತಿ ಅಷ್ಟೊಂದು ಇರದೇ ಇದ್ದ ಸಮಯದಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಹೆಚ್ಚಾಗಿ ತಾ.ಪಂ. ಕಚೇರಿಯ ವತಿಯಿಂದ ನಡೆಯುತ್ತಿದ್ದು, ಅಂದು ಮಾಜಿ ಸಚಿವರಾಗಿದ್ದ ದಿ. ಹೆಚ್.ಶಿವಪ್ಪ ಸರ್ಕಾರಕ್ಕೆ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಸರ್ಕಾರ ಭಾನುವಳ್ಳಿ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಮಹಾದ್ವಾರದ ಕಾಮಗಾರಿ ಆರಂಭ ಮಾಡಲಾಯಿತು ಎಂದರು.

ಆ ಸಮಯದಲ್ಲಿ ಕಾಮಗಾರಿ ಗುತ್ತಿಗೆ ಪಡೆದಿದ್ದ ವ್ಯಕ್ತಿ ಕೊಟ್ರಪ್ಪ ಎ.ಜಿ. ಇವರು ನಮ್ಮ ಜೊತೆಗೇ ಇದ್ದು, ಅವರೆ ಅವತ್ತು ಹೇಗೆ, ಯಾವ ಅನುದಾನದ ಅಡಿಯಲ್ಲಿ ಕಾಮಗಾರಿ ಆರಂಭ ಮಾಡಲಾಯಿತು ಎಂದು ಪ್ರಸ್ತಾಪ ಮಾಡುತ್ತಿರುವಾಗ, ಈವಾಗ ಹಾಲುಮತ ಸಹೋದರ ಸಮಾಜದವರು ಯಾವುದೇ ರೀತಿಯ ದಾಖಲೆಗಳು ಇಲ್ಲದೆ, ಮಹರ್ಷಿ ವಾಲ್ಮೀಕಿ ಮಹಾದ್ವಾರವನ್ನು ತೆರವುಗೊಳಿಸಲು ಸರ್ಕಾರಕ್ಕೆ ಗಡುವು ಕೊಟ್ಟಿರುವುದು ಹಾಸ್ಯಾಸ್ಪದ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಆರ್.ಸಿ. ಪಾಟೀಲ್, ಬಿ.ಎಂ. ಮಂಜಪ್ಪ, ಆಟೋ ರಾಜು, ಸಿದ್ದಪ್ಪ ದೊಡ್ಡಮನೆ, ಮಲ್ಲಪ್ಪ, ಭರತ್, ಧನರಾಜ್ ಇತರರು ಹಾಜರಿದ್ದರು.

## ಉಕ್ಕಡಗಾತ್ರಿ ಗ್ರಾ.ಪಂ ಉಪಾಧ್ಯಕ್ಷರಾಗಿ ಭರಮಗೌಡ



ಮಲೇಬೆನ್ನೂರು, ಫೆ.20- ಉಕ್ಕಡಗಾತ್ರಿ ಗ್ರಾ.ಪಂ.ನ ಉಪಾಧ್ಯಕ್ಷರಾಗಿ ಭರಮಗೌಡ ಶಿವಪೂಜೆ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಪಿ.ಆರ್. ರಾಮಕೃಷ್ಣ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಗ್ರಾ. ಪಂ. ಅಧ್ಯಕ್ಷರಾದ ಶ್ರೀಮತಿ ಭಾರತಿ ಕಟಿಗೇರ. ಪಿಡಿಓ ಟಿ.ಪಿ. ರಾಮಚಂದ್ರಪ್ಪ ಮತ್ತು ಇತರರು ಹಾಜರಿದ್ದರು.

## ಭಾವಪೂರ್ಣ ಶ್ರದ್ಧಾಂಜಲಿ

ನಮ್ಮನ್ನಗಲಿದ



**ಡಾ|| ಜಿ. ಶಿವಪ್ರಕಾಶ್**
ನಿವೃತ್ತ ಮುಖ್ಯಸ್ಥರು, ಆರ್ಥೋಡಾಂಟಿಕ್ಸ್ ವಿಭಾಗ
ಕಾಲೇಜ್ ಆಫ್ ಡೆಂಟಲ್ ಸೈನ್ಸಸ್, ದಾವಣಗೆರೆ.



**ಡಾ|| ಶಶಿಧರ ಆರ್. ಮರಳೀಹಳ್ಳಿ**
ಹೃದಯ ತಜ್ಞರು ಮತ್ತು ವಿಶ್ರಾಂತ ಪ್ರಾಧ್ಯಾಪಕರು,
ಜೆಜೆಎಂ ಮೆಡಿಕಲ್ ಕಾಲೇಜ್, ದಾವಣಗೆರೆ.

ಅವರುಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇವೆ.

✦ ಜೆ. ಈಶ್ವರ್‌ಸಿಂಗ್ ಕವಿತಾಳ, ಬಿಂದಾಸ್ ಗ್ರೂಪ್
✦ ಡಾ|| ಕಿಶನ್ ದುಬೈ ✦ ಡಾ|| ಸುರೇಶ್ ಬಾಬು ✦ ಡಾ|| ಮಧು ಪೂಜಾರ್
✦ ಸಿ. ಭೀಮರಾಜ್, ಸಿವಿಲ್ ಇಂಜಿನಿಯರ್ ✦ ಕೆ.ಸಿ. ಜಗನ್ನಾಥ್, ಸಿವಿಲ್ ಇಂಜಿನಿಯರ್
✦ ಯೋಗಾನಂದ ✦ ಶ್ರೀಕಾಂತ್ (ಪಿಕ್ಕ) ✦ ಮಧುಕರ್ ✦ ಸಿದ್ದೇಶ್
✦ ರುದ್ರಮುನಿಸ್ವಾಮಿ ✦ ಎಂ.ಪಿ. ಪ್ರಶಾಂತ್ ✦ ಡಾ|| ಸತೀಶ್
✦ ಸುನೀಲ್ ಚವ್ಹಾಣ್ ✦ ಡಾ|| ಮಂಜುನಾಥ ಬಿ.ಹೆಚ್. ✦ ಡಾ|| ಚಂದ್ರು
✦ ಡಾ|| ರವೀಂದ್ರ ಬಣಕಾರ್ ✦ ಡಾ|| ಮಹೇಶ್ ✦ ಡಾ|| ರುದ್ರಮುನಿ (ACK)
✦ ಡಾ|| ರಮೇಶ್ ✦ ಡಾ|| ಹರ್ಷ ✦ ಡಾ|| ರವೀಂದ್ರನಾಥ್
✦ ಡಾ|| ಜ್ಯೋತಿಪ್ರಕಾಶ್ ✦ ಡಾ|| ಶಂಭು ಪಲ್ಲಾಗಟ್ಟೆ ✦ ಮಧುಕರ್, ಬಾಪೂಜಿ ಬ್ಯಾಂಕ್
✦ ಡಾ|| ರುದ್ರೇಶ್ ಹೆಚ್.ಕೆ. ✦ ಡಾ|| ರುದ್ರೇಶ್ ಜಿ.ಡಿ. ✦ ಸಂತೋಷ್ ಮತ್ತಿಹಳ್ಳಿ
✦ ಸಾಗರ್ ಸಿದ್ದಣ್ಣ ✦ ನವೀನ್ ದಿಬ್ಬದಹಳ್ಳಿ ✦ ಶಶಾಂಕ್ ಜಿ.ಎಂ.
✦ ಡಾ|| ಸುಬ್ಬರಾವ್, ಸಿಟಿ ಸೆಂಟ್ರಲ್ ಆಸ್ಪತ್ರೆ ಮತ್ತು ಸಿಬ್ಬಂದಿ ವರ್ಗ
✦ ಕುಮಾರ್, ಬ್ಲಡ್ ಬ್ಯಾಂಕ್ ✦ ನಿರಂಜನ ಮೂರ್ತಿ ಹಾಗೂ

**ಪ್ಯಾರಾಮೌಂಟ್ ಸ್ನೇಹಿತರ ಬಳಗ, ದಾವಣಗೆರೆ.**

## ಕೂಲಿ ಕಾರ್ಮಿಕರ ಧರಣಿ ಸತ್ಯಾಗ್ರಹ

ದಾವಣಗೆರೆ, ಫೆ. 20- ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕೂಲಿ ಹಣ ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಯೋಜನೆ ಅನುಷ್ಠಾನದಲ್ಲಾಗುತ್ತಿರುವ ಲೋಪದೋಷಗಳನ್ನು ಸರಿಪಡಿಸಬೇಕು ಹಾಗೂ ಬರಗಾಲದ ಪರಿಣಾಮವಾಗಿ ಹೆಚ್ಚುವರಿ ಇನ್ನೂ 50 ಮಾನವ ದಿನಗಳನ್ನು ನೀಡಲು ಆಗ್ರಹಿಸಿ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಕಾರ್ಯಕರ್ತರು ಜಿಲ್ಲಾ ಪಂಚಾಯತ್ ಮುಂಭಾಗ ಧರಣಿ ಸತ್ಯಾಗ್ರಹ ನಡೆಸಿದರು.

ಸಂಘಟನೆಯ ಅಧ್ಯಕ್ಷ ಎ.ಕೆ. ಗುಡದಯ್ಯ ಮಾತನಾಡಿ ಚನ್ನಗಿರಿ, ಹೊನ್ನಾಳಿ, ದಾವನಗೆರೆ ಮತ್ತು ಹರಿಹರ ತಾಲ್ಲೂಕುಗಳಲ್ಲಿ ಅರ್ಹ ಕಾರ್ಮಿಕರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಲ್ಲಿ ಕಾರ್ಯನಿರ್ವಹಿಸುತ್ತಾ ಬರುತ್ತಿದ್ದಾರೆ. ಕಾಯ್ದೆ ಪ್ರಕಾರ ದುಡಿಯುವ ಕೈಗಳಿಗೆ ಉದ್ಯೋಗ ಮತ್ತು ಕೂಲಿ ಹಣ ಪಾವತಿಸಬೇಕಾಗಿದೆ. ಆದರೆ ಅರ್ಹ ಫಲಾನುಭವಿಗಳಿಗೆ ಸಕಾಲಕ್ಕೆ ಹಣ ಪಾವತಿ ಮಾಡುತ್ತಿಲ್ಲ. ಈ ಬಗ್ಗೆ ಇಲಾಖೆಯ ಗಮನಕ್ಕೆ ತಂದಿದ್ದರೂ ಸಹ, ಪ್ರಯೋಜನವಾಗುತ್ತಿಲ್ಲ. ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಅನುಷ್ಠಾನ ಮತ್ತು ಉಸ್ತುವಾರಿ ಅಧಿಕಾರಿಗಳು ಸೂಕ್ತ ಕ್ರಮವಹಿಸುತ್ತಿಲ್ಲ ಎಂದರು.

ಧರಣಿ ಸತ್ಯಾಗ್ರಹದಲ್ಲಿ ಆರ್. ತಿಪ್ಪೇರುದ್ರಪ್ಪ, ಕೆ.ಎಂ. ವೀರಮ್ಮ ನೇತ್ರಾವತಿ, ರೂಪಾನಾಯ್ಕ, ರೇಖಾ, ಗಂಗಮ್ಮ, ಹೇಮಾವತಿ, ರಾಜಪ್ಪ, ಶಾಂತಮ್ಮ ತಿಪ್ಪೇಶ್, ಮುದುಕಪ್ಪ ಮತ್ತಿತರರು ಪಾಲ್ಗೊಂಡಿದ್ದರು.

## ಚಿರಸ್ಮರಣೆ



**ದಿ|| ಕೆ.ರಾಮಚಂದ್ರರಾವ್**

ನೀವು ನಮ್ಮನ್ನಗಲಿ ದಿ. 17-2-2024ಕ್ಕೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ...

**ಪುತ್ರ, 6 ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಗಂಡಗಾಳೆ ಬಂಧುಗಳು, ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್ ಪ್ರೈಸಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.**

## ತರಕಾರಿ ಶ್ರೀಮತಿ ನಾಗರತ್ನಮ್ಮ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ, ಬನ್ನಿ ಕಾಳಮ್ಮ ದೇವಸ್ಥಾನ ಹತ್ತಿರದ ವಾಸಿ ತರಕಾರಿ ಶ್ರೀಮತಿ ನಾಗರತ್ನಮ್ಮ (74) ಇವರು ದಿನಾಂಕ 20.02.2024ರ ಮಂಗಳವಾರ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.02.2024ರ ಬುಧವಾರ ಬೆಳಿಗ್ಗೆ 10.30ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಇಂದು ಸಂಯುಕ್ತ ಪ್ರಾದೇಶಿಕ ಚಿಕಿತ್ಸಾ ಕೇಂದ್ರ ಉದ್ಘಾಟನೆ

ದಾವಣಗೆರೆ, ಫೆ.20- ವಡ್ಡಿನಹಳ್ಳಿಯಲ್ಲಿ ನಿರ್ಮಿಸಿರುವ ನೂತನ ಸಂಯುಕ್ತ ಪ್ರಾದೇಶಿಕ ಚಿಕಿತ್ಸಾ ಕೇಂದ್ರ ಕಟ್ಟಡದ ಉದ್ಘಾಟನೆ ಫೆ. 21ರಂದು ಮಧ್ಯಾಹ್ನ 1ಗಂಟೆಗೆ ನಡೆಯಲಿದೆ ಎಂದು ಕೇಂದ್ರದ ನೋಡಲ್ ಅಧಿಕಾರಿ ಗಣೇಶ್ ಶೇರೆಗಾರ್ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರಕುಮಾರ್ ಹಾಗೂ ರಾಜ್ಯ ಸಚಿವ ಎ.ನಾರಾಯಣ ಸ್ವಾಮಿ ವರ್ಚ್ಯುಯಲ್ ಮೂಲಕ ಕಟ್ಟಡ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಡಾ. ಜಿ.ಎಂ.ಸಿದ್ದೇಶ್ವರ, ಶಾಸಕರು, ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು, ಸಿರ್‌ಸಿ ಕೇಂದ್ರದ ನಿರ್ದೇಶಕಿ ಮೀನಾಕ್ಷಿ, ಬಿ.ವಿ.ರಾಮ್ ಕುಮಾರ್ ಇತರರು ಭಾಗವಹಿಸಲಿದ್ದಾರೆ ಎಂದರು. ಕೇಂದ್ರ ಪುನರ್ ವಸತಿ ನೋಡಲ್ ಅಧಿಕಾರಿ ಕನಕ ಸಭಾಪತಿ ಉಪಸ್ಥಿತರಿದ್ದರು.

## ಸಂತ ಸೇವಾಲಾಲ್ ಜಯಂತಿ ವೇಳೆ ಹಲ್ಲೆ: ಕ್ಷಮೆಗೆ ಆಗ್ರಹ

ದಾವಣಗೆರೆ, ಫೆ.20- ಸೂರಗೊಂಡನಕೊಪ್ಪದಲ್ಲಿ ಇತ್ತೀಚೆಗೆ ನಡೆದ ಸಂತ ಸೇವಾಲಾಲ್ ಜಯಂತಿ ಆಚರಣೆ ವೇಳೆ ಪೂಜೆ ಮಾಡುತ್ತಿದ್ದ ತಮ್ಮ ಮೇಲೆ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ಅಧ್ಯಕ್ಷ ಹಾಗೂ ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ ಹಲ್ಲೆ ಮಾಡಿದ್ದು, ಅವರು ಕೂಡಲೇ ಕ್ಷಮೆ ಕೇಳಬೇಕು ಎಂದು ಸಂತ ಬಾಲಕೃಷ್ಣ ಮಹಾರಾಜ್ ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ. ಬಂಜಾರ ಸಮುದಾಯದ ಪ್ರಮುಖರಾದ ಪುರುಷೋತ್ತಮ್ ನಾಯ್ಕ, ಪ್ರಕಾಶ್ ನಾಯ್ಕ, ಅನಂತನಾಯ್ಕ ಇನ್ನಿತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## 1,100 ಕೋಟಿ ಮೌಲ್ಯದ ಮಾದಕ ವಶ

ಪುಣೆ, ಫೆ. 20 - ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪೊಲೀಸರು 600 ಕೆ.ಜಿ.ಯ ಸಿಂಥೆಟಿಕ್ ಮೆಫೆಡ್ರೊನ್ ಮಾದಕ ವಶಪಡಿಸಿಕೊಂಡಿದ್ದಾರೆ. ಇದರ ಮೌಲ್ಯ 1,100 ಕೋಟಿ ರೂ. ಆಗಿದೆ ಎಂದು ನಗರ ಪೊಲೀಸ್ ಆಯುಕ್ತರು ಹೇಳಿದ್ದಾರೆ. ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ. ಬಂಧಿತರ ವಿರುದ್ಧ ಎನ್.ಡಿ.ಪಿ.ಎಸ್. ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

## ಹಾಸ್ಯದ ರಸದೌತಣ ಉಣಿಸಿದ ಸುದ್ದಿ ಮಿತ್ರ ಸಾಂಸ್ಕೃತಿಕ ವೇದಿಕೆ



ಕೊಟ್ಟೂರು, ಫೆ. 20 - ಕೊಟ್ಟೂರಿನಲ್ಲಿ ಸುಮಾರು ಎರಡು ದಶಕಗಳಿಂದ ಸಂಗೀತ ಹಾಗೂ ರಸಮಂಜರಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿರುವ ಕೆ.ಎಂ. ಚಂದ್ರಶೇಖರ್, ಗೌರಿಹಳ್ಳಿ ಮಂಜುನಾಥ್ ಇವರ ಸುದ್ದಿ ಮಿತ್ರ ಸಾಂಸ್ಕೃತಿಕ ವೇದಿಕೆ ಸಂಸ್ಥೆ ಇವರಿಂದ 'ಹಾಸ್ಯ ಸಂಭ್ರಮ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ತಿಪ್ಪೇಸ್ವಾಮಿ ವೆಂಕಟೇಶ್ ಅವರು ನೆರವೇರಿಸಿ ಮಾತನಾಡಿ, ಈ 21ನೇ ಶತಮಾನದ ಮುಂದಿನ 20 ಶತಮಾನಗಳ ಕಂಪ್ಯೂಟರ್ ಜಗತ್ತು ಆಳುತ್ತದೆ. ಇಂದಿನ ದಿನಗಳಲ್ಲಿ ಹಾಸ್ಯ ಸಂಭ್ರಮ ಉಳಿದಿರುವುದು ಕಲಾಭಿಮಾನಿ, ಕಲಾ ಪ್ರೋತ್ಸಾಹಕರಿಂದ ಹಾಸ್ಯ ಕಾರ್ಯಕ್ರಮ ಸಂಭ್ರಮಕ್ಕೆ ಮೆರುಗು ಮೂಡಿಸಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಡಿಎಸ್‌ಎಸ್ ಮುಖಂಡ ಬದ್ದಿ ಮರಿಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ವೆಂಕಟೇಶ್ ತಿಪ್ಪೇಸ್ವಾಮಿ, ವಕೀಲರ ಸಂಘದ ಅಧ್ಯಕ್ಷ ಜಿ.ಎಂ. ಮಲ್ಲಿಕಾರ್ಜುನ್, ಬದ್ದಿ ಮರಿಸ್ವಾಮಿ, ಅಡಕಿ ಮಂಜುನಾಥ್, ಕೆ ಕೊಟ್ರೇಶ್, ಬದ್ದಿ ಮಂಜುನಾಥ್, ಪ್ರದೀಪ್ ಕುಮಾರ್, ತೆಗ್ಗಿನಕೇರಿ ಹನುಮಂತಪ್ಪ ವಕೀಲರು, ಎಬಿಎಂ ಪ್ರವೀಣ್, ಯು. ಎಂ.ಎ. ರೇವಣ ಸಿದ್ದಯ್ಯ, ಕಬ್ಬಳ್ಳಿ ಪರಸಪ್ಪ, ಸಾತ್ವಾಡಿ ಕೊಟ್ರೇಶ್ ಬತ್ತನ ಹಳ್ಳಿ, ಸಿಪಿಎಂಎಲ್ ಕಮ್ಯುನಿಸ್ಟ್ ಪಾರ್ಟಿ ತಾಲ್ಲೂಕು ಕಾರ್ಯದರ್ಶಿ ಜಿ. ಮಲ್ಲಿಕಾರ್ಜುನ್, ಪತ್ರ ಬರಹಗಾರರು ಪಂಚಾಕ್ಷರಿ, ಬಿಡಿಸಿಸಿ ಬ್ಯಾಂಕ್ ಅಂಬಳಿ ಕೊಟ್ರೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರು ಗುರುಮೂರ್ತಿ, ಅಂಗಡಿ ಪ್ರಕಾಶ್ ಮತ್ತಿಹಳ್ಳಿ, ಮರಳು ಸಿದ್ದಯ್ಯ, ಇನ್ನೂ ಅನೇಕ ಪ್ರಮುಖ ಮುಖಂಡ ರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ನುರಿತ ಹಾಸ್ಯ ಕಲಾವಿದರಾದ ಗಂಗಾವತಿ ನರಸಿಂಹ ಜೋಶಿ, ಜೀವನ ಸಾಬ್, ಗವಿ ಸಿದ್ದಯ್ಯ ಹಳ್ಳಿಕೇರಿ ಮಠ, ಕನ್ನಡದ ಕಣ್ಮಣಿ ಅನುಷಾ ಕೆ ಹಿರೇಮಠ್, ಈ ಕಾರ್ಯಕ್ರಮಕ್ಕೆ ಆಗಮಿಸಿ ಕಲಾತಂಡ ದವರು ಕೊಟ್ಟೂರಿನ ಜನರಿಗೆ ಹಾಸ್ಯ ಚಟಾಕಿ ಸಿಡಿಸಿದರು. ನಿರೂಪಣೆಯನ್ನು ಗುರುಪ್ರಸಾದ್ ಜೆಎಂ ನೆರವೇರಿಸಿದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಸಂದೇಶ್‌ಖಾಲಿಗೆ ಬಿಜೆಪಿ, ಸಿಪಿಐ (ಎಂ) ನಾಯಕರ ಭೇಟಿ**

ಸಂದೇಶ್‌ಖಾಲಿ ( ಪಶ್ಚಿಮ ಬಂಗಾಳ) : ಕಲ್ಕತ್ತಾ ಹೈಕೋರ್ಟ್ ಮಧ್ಯ ಪ್ರವೇಶದ ನಂತರ ಬಿಜೆಪಿ ಹಾಗೂ ಸಿಪಿಐ (ಎಂ) ನಾಯಕರು ಸಂದೇಶ್‌ಖಾಲಿ ಪ್ರದೇಶಕ್ಕೆ ಭೇಟಿ ನೀಡಿದ್ದಾರೆ. ಈ ಪ್ರದೇಶದ ಪರಿಸ್ಥಿತಿ ಆಘಾತಕಾರಿಯಾಗಿದೆ ಹಾಗೂ ಅರಾಜಕತೆ ಇದೆ ಎಂದು ಉಭಯ ಪಕ್ಷಗಳ ನಾಯಕರು ಹೇಳಿದ್ದಾರೆ. ಸಂದೇಶ್‌ಖಾಲಿಯಲ್ಲಿ ಟಿ.ಎಂ.ಸಿ. ಮುಖಂಡರಿಂದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ ಎಂದು ಆರೋಪಿಸಲಾಗಿತ್ತು.

**ಏಕಕಾಲಕ್ಕೆ ಚುನಾವಣೆಗಾಗಿ ಬಿಜೆಪಿ ಪ್ರಬಲ ಪ್ರತಿಪಾದನೆ**

ನವದೆಹಲಿ : ಲೋಕಸಭೆ, ವಿಧಾನಸಭೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಏಕ ಕಾಲಕ್ಕೆ ಚುನಾವಣೆ ನಡೆಸಬೇಕು. ಎಲ್ಲಾ ಚುನಾವಣೆಗಳಿಗೂ ಒಂದೇ ಮತದಾರರ ಪಟ್ಟಿ ಇರಬೇಕು ಎಂದು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಸಮಿತಿ ಎದುರು ಬಿಜೆಪಿ ಪ್ರತಿಪಾದಿಸಿದೆ. ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ವರದಿ ನೀಡಲು ಈ ಸಮಿತಿ ರಚಿಸಲಾಗಿದೆ.

**ಕಾಂಗ್ರೆಸ್ ಪಕ್ಷಕ್ಕೆ ದಿಕ್ಕು ದೆಸೆ ಇಲ್ಲ : ಅಮಿತ್ ಷಾ**

ಜೈಪುರ : ಕಾಂಗ್ರೆಸ್ ಪಕ್ಷಕ್ಕೆ ದಿಕ್ಕು ದೆಸೆ ಇಲ್ಲ. ಆ ಪಕ್ಷ ಭಾರತ ಅಭಿವೃದ್ಧಿ ಪಡಿಸಲು ಇಲ್ಲವೇ ಬಡವರ ಅಭಿವೃದ್ಧಿ ಮಾಡಲು ಸಾಧ್ಯವಾಗದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ.

**ಶಶಿ ಥರೂರ್‌ಗೆ ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ**

ನವದೆಹಲಿ : ಕಾಂಗ್ರೆಸ್ ನಾಯಕ, ಲೇಖಕ ಹಾಗೂ ಮಾಜಿ ರಾಯಭಾರಿ ಶಶಿ ಥರೂರ್ ಅವರಿಗೆ ಫ್ರಾನ್ಸ್‌ನ ಅತ್ಯುನ್ನತ ನಾಗರಿಕ ಗೌರವವಾದ ಚೆವೆಲಿಯರ್ ಡಿ ಲಾ ಲಿಜನ್ ಡಿಹಾನರ್ ಪ್ರದಾನ ಮಾಡಲಾಗಿದೆ.

**ಮಾನಹಾನಿ ಪ್ರಕರಣ : ಕೋರ್ಟ್ ಎದುರು ರಾಹುಲ್ ಹಾಜರಿ**

ಸುಲ್ತಾನ್‌ಪುರ (ಉತ್ತರ ಪ್ರದೇಶ) : 2018ರ ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ವಿಶೇಷ ನ್ಯಾಯಾಲಯದ ಎದುರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಜರಾಗಿದ್ದು, ಅವರಿಗೆ ಜಾಮೀನು ನೀಡಲಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ವಿರುದ್ಧ ಹೇಳಿಕೆ ನೀಡಿದ್ದರ ಸಂಬಂಧ ರಾಹುಲ್ ಗಾಂಧಿ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಲಾಗಿತ್ತು.

**ಭಾರತದ ಆರ್ಥಿಕತೆಯ ಹಾದಿ ಉತ್ತಮವಾಗಿದೆ : ಹಣಕಾಸು ಸಚಿವಾಲಯದ ವರದಿ**

ನವದೆಹಲಿ : ಭಾರತದ ಆರ್ಥಿಕತೆಯ ದಾರಿ ಉತ್ತಮವಾಗಿದೆ, ಮುಂದಿನ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆಯ ಪ್ರಮಾಣ ಶೇ.7ರಷ್ಟಿರಲಿದೆ ಎಂದು ಹಣಕಾಸು ಸಚಿವಾಲಯದ ವರದಿ ತಿಳಿಸಿದೆ. ಆದರೂ, ಭೂರಾಜಕೀಯದ ಉದ್ವಿಗ್ನತೆ ಹಾಗೂ ಅಂತರರಾಷ್ಟ್ರೀಯ ಹಣಕಾಸು ಮಾರುಕಟ್ಟೆಗಳ ಏರಿಳಿತಗಳ ಮೇಲೆ ಕಣ್ಣಿಡಬೇಕಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

# ತ್ಯಾವಣಿಗೆಗೆ ಆಗಮಿಸಿದ ರೈತರ ಪಾದಯಾತ್ರೆ

## ಬೇಡಿಕೆ ಈಡೇರಿಕೆಗಾಗಿ 22 ರಂದು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ



ದಾವಣಗೆರೆ, ಫೆ. 20 - ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತಸಂಘ ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದಿಂದ ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದಿಂದ ದಾವಣಗೆರೆ ಜಿಲ್ಲಾಧಿಕಾರಿ ಕಚೇರಿವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಯ ಎರಡನೇ ದಿನವಾದ ಮಂಗಳವಾರ ತ್ಯಾವಣಿಗೆ ಗ್ರಾಮ ಪಂಚಾಯತ್ ಎದುರು ಸಾರ್ವಜನಿಕ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕುಕ್ಕುವಾಡ ಮಂಜುನಾಥ್, ಕೇಂದ್ರದ ಬಿಜೆಪಿ ಸರ್ಕಾರ ಸಾಮಾನ್ಯ ಜನರು, ರೈತರ ಪರವಾಗಿ ಕಾಯಿದೆಗಳನ್ನು ಜಾರಿಗೊಳಿಸದೆ ಬಂಡವಾಳ ಶಾಹಿಗಳ ಪರವಾಗಿದ್ದು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನು ಜಾರಿಗೆ ತರುತ್ತಿದೆ ಎಂದು ಆರೋಪಿಸಿದರು.

ಜಿ.ಪಂ. ಮಾಜಿ ಸದಸ್ಯ ಪಿ.ಸಿ. ಗೋವಿಂದಸ್ವಾಮಿ ಮಾತನಾಡಿ, ತಾಲ್ಲೂಕು ಕೇಂದ್ರವಾಗಲು ಎಲ್ಲ ಸೌಲಭ್ಯಗಳನ್ನು ಹೊಂದಿರುವ ತ್ಯಾವಣಿಗೆ ಗ್ರಾಮವನ್ನು ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಬೇಕು. ತಾಲ್ಲೂಕು ಘೋಷಣೆಗೆ ಸಂಬಂಧಿಸಿದಂತೆ ಸರ್ಕಾರದ ನೂರು ಎಕರೆ ಜಮೀನು ಇದ್ದು, ಸರ್ಕಾರ ಕೂಡಲೇ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಎಲೋದಹಳ್ಳಿ ರವಿ ಮಾತನಾಡಿ, ಕಳೆದ ಎರಡು ದಿನಗಳಿಂದ ಪಾದಯಾತ್ರೆ ನಡೆಯುತ್ತಿದೆ. ಇದುವರೆಗೂ ಯಾವುದೇ ಅಧಿಕಾರಿಗಳು ನಮ್ಮ ಬೇಡಿಕೆ ಆಲಿಸಲು ಬಂದಿಲ್ಲ. ಈ ಕೂಡಲೇ ಬಗರ್ ಹುಕ್ಕುಂ ಅಡಿ ಸಲ್ಲಿಸಿದ್ದ ಫಾರಂ ನಂಬರ್ 57 ನ್ನು ತಿರಸ್ಕರಿಸುವ ಬದಲು ಸಂಭವಿಸಿದವರಿಗೆ ಸರಿಯಾದ ಮಾಹಿತಿ ಒದಗಿಸಿ ಭೂಮಿ ಹಕ್ಕುಪತ್ರಗಳನ್ನು ನೀಡಬೇಕೆಂದು ಆಗ್ರಹಿಸಿದರು.

ಗಂಡುಗಲಿ ಮಾತನಾಡಿ, ಆಸ್ತಾಪನಹಳ್ಳಿಯಲ್ಲಿ ಎಂಪಿಎಂ ಮಿಲ್‌ಗೆ ನೀಡಿರುವ ಭೂಮಿಯ ಲೀಸ್ ಅವಧಿ ಮುಗಿದಿದ್ದು, ಮತ್ತೆ ಈ ಜಮೀನನ್ನು ಎಂಪಿಎಂಸಿಗೆ ಲೀಸ್ ನೀಡುವ ಬದಲು ವಾಪಾಸ್ ಪಡೆದು ಬಗರ್ ಹುಕ್ಕುಂ ರೈತರಿಗೆ ಹಂಚಿಕೆ ಮಾಡಬೇಕೆಂದು ಒತ್ತಾಯಿಸಿದರು.

ನಿಟುವಳ್ಳಿ ಪೂಜಾರ ಅಂಜಿನಪ್ಪ ಮಾತನಾಡಿದರು. ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಕಾಯಿದೆ ಜಾರಿ ಮಾಡಬೇಕೆಂದು ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಕೇಂದ್ರ ಸರ್ಕಾರ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ರೈತರ ಮೇಲೆ ಶೆಲ್ ದಾಳಿ, ಜಲ ಫಿರಂಗಿ ಪ್ರಯೋಗಿಸುವ ಮೂಲಕ ಹೋರಾಟ ಹತ್ತಿಕ್ಕಲಾಗುತ್ತಿದೆ. ಕನಿಷ್ಠ ಬೆಂಬಲ ಬೆಲೆಗೆ ಏಕೆ ಕಾನೂನು ರಚನೆ ಮಾಡುತ್ತಿಲ್ಲ. ಈ ಕಾನೂನು ಜಾರಿಯಾಗದೆ ಹೊರತು ಯಾವುದೇ ಕಾರಣಕ್ಕೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ರಾಜ್ಯ ಸರ್ಕಾರ ಉಚಿತ ಅಕ್ಕಿ ನೀಡುತ್ತಿದೆ, ಮತ್ತೊಂದೆಡೆ ಕೇಂದ್ರ ಸರ್ಕಾರ 29 ರೂಗೆ ಭಾರತ್ ರೈಸ್ ಹೆಸರಿನಲ್ಲಿ ಕಡಿಮೆ ಬೆಲೆಗೆ ಅಕ್ಕಿ ಬಿಡುಗಡೆ ಮಾಡಿದೆ. ಇದು ಸಹಜವಾಗಿಯೇ ಭತ್ತ ಬೆಳೆಗಾರರಿಗೆ ಆತಂಕ ತಂದಿದೆ. ಇದರ ಪರಿಣಾಮ ಭತ್ತದ ಬೆಲೆ ಕುಸಿದಿದೆ. ಈಗಾಗಲೇ ಖರೀದಾರರು ಖರೀದಿ ಮಾಡಿರುವ ಭತ್ತದ ಹಣ ಕೇಳಲು ಹೋದರೆ ಗೋದಾಮಿನಲ್ಲಿರುವ ನಿಮ್ಮ ಭತ್ತ ನೀವೇ ತೆಗೆದುಕೊಂಡು ಹೋಗಿ ಎನ್ನುತ್ತಿದ್ದಾರೆ. ಇದಕ್ಕೆ ಹೊಣೆಗಾರರು ಯಾರು ಎಂದು ಪ್ರಶ್ನಿಸಿದ ಮಂಜುನಾಥ್, ಈ ಎಲ್ಲ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಫೆ.22 ರ ನಾಳೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲ ಬಗರ್ ಹುಕ್ಕುಂ ರೈತರು, ಸಾಸ್ವೆಹಳ್ಳಿ ಏತ ನೀರಾವರಿ ಯೋಜನಾ ವ್ಯಾಪ್ತಿಯ ರೈತರು, ಜಗಳೂರು ರೈತರು, ಆಶ್ರಯ ನಿವೇಶನಕ್ಕಾಗಿ ಹೋರಾಟ ಮಾಡುತ್ತಿರುವ ವಸತಿ ರಹಿತರು ಸೇರಿದಂತೆ ಎಲ್ಲರೂ ಕೂಡ ಈ ಬೃಹತ್ ಹೋರಾಟದಲ್ಲಿ ಭಾಗಿಯಾಗಬೇಕು. ಇದಕ್ಕಾಗಿ ನಾಳೆ ಹದಡಿ ರಸ್ತೆಯಲ್ಲಿರುವ ಶಿರಮಗೊಂಡನಹಳ್ಳಿ ಬಳಿಯ ಬೈಪಾಸ್ ರಸ್ತೆ ಸೇರಬೇಕು. ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಯಲಿದೆ ಎಂದು ಹೇಳಿದರು.

ಸ್ಥಳೀಯ ಗ್ರಾ.ಪಂ. ಅಧ್ಯಕ್ಷ ಕರಿಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮುಖಂಡರಾ್ ಶರಣಮ್ಮ, ಕೋಗಲೂರು ಕುಮಾರ, ಉಪ್ಪನಾಯಕಹಳ್ಳಿ ಉಮೇಶ್ ಮುಂತಾದವರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಕರವೇಯಿಂದ ಕನ್ನಡ ಜಾಗೃತಿ ಬೃಹತ್ ಜಾಥಾ

ದಾವಣಗೆರೆ, ಫೆ. 20- ನಾಳೆ ದಿನಾಂಕ 21ರ ಬುಧವಾರ ಕರ್ನಾಟಕ ರಕ್ಷಣಾ ವೇದಿಕೆಯಿಂದ ಕನ್ನಡ ಜಾಗೃತಿ ಬೃಹತ್ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ರಾಮೇಗೌಡ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರು ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ, ಮಾಜಿ ಅಧ್ಯಕ್ಷ ಮಂಜುನಾಥ್ ಕುರ್ಕಿ, ಹಿರಿಯ ಪತ್ರಕರ್ತ ಬಾ.ಮ ಬಸವರಾಜಯ್ಯ ಉಪಸ್ಥಿತರಿರಲಿದ್ದಾರೆ. ಶೇ.60ರಷ್ಟು ಕನ್ನಡ ಭಾಷೆಯಲ್ಲಿ ನಾಮಫಲಕ ಹಾಕದಿರುವವರ ವಿರುದ್ಧ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಮಾ.5ರಂದು ಪಾಲಿಕೆಗೆ ಬೀಗ ಹಾಕಿ ಪ್ರತಿಭಟಿಸಲಾಗುವುದು. ಇದಕ್ಕೂ ಸ್ಪಂದಿಸದಿದ್ದರೆ ಕರವೇಯಿಂದ ಮಾ.15ರಂದು ಆಂಗ್ಲ ನಾಮಫಲಕಗಳನ್ನು ಕಿತ್ತು ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಕರವೇ ಜಿಲ್ಲಾ ಗೌರವ ಅಧ್ಯಕ್ಷ ವಾಸುದೇವ ರಾಯ್ಕರ್, ಮಲ್ಲಿಕಾರ್ಜುನ್, ರವಿ ಕುಮಾರ್, ಎನ್.ಟಿ. ಹನುಮಂತಪ್ಪ, ಎಂ.ಡಿ. ರಫೀಕ್, ಜಬಿವುಲ್ಲಾ ಪೈಲ್ವಾನ್, ಆಟೋ ರಫೀಕ್ ಮತ್ತಿತರರು ಉಪಸ್ಥಿತರಿದ್ದರು.

# ಚಂಡೀಘಡ : ಎಎಪಿ ಅಭ್ಯರ್ಥಿ ಗೆಲುವು ಘೋಷಿಸಿದ ಸುಪ್ರೀಂ

ನವದೆಹಲಿ, ಫೆ. 20 - ಚಂಡೀಘಡ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯ ಫಲಿತಾಂಶ ರದ್ದುಗೊಳಿಸಿರುವ ಸುಪ್ರೀಂ ಕೋರ್ಟ್, ಆಮ್ ಆದ್ಮಿ ಪಾರ್ಟಿ - ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿ ಕುಲ್ದೀಪ್ ಕುಮಾರ್ ಗೆದ್ದಿರುವುದಾಗಿ ಘೋಷಿಸಿದೆ.

ಈ ಹಿಂದೆ ನಡೆಸಲಾದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮನೋಜ್ ಸೋಂಕರ್ ಗೆದ್ದಿರುವುದಾಗಿ ಘೋಷಿಸಲಾಗಿತ್ತು. ಚುನಾವಣಾ ಪ್ರಕ್ರಿಯೆಯಲ್ಲಿ ಗಂಭೀರ ಲೋಪಗಳಾಗಿವೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಇಡೀ ಚುನಾವಣಾ ಪ್ರಕ್ರಿಯೆ ರದ್ದುಗೊಳಿಸುವುದಿಲ್ಲ. ಎಣಿಕೆಯಲ್ಲಿ ತಪ್ಪಾಗಿರುವುದನ್ನು ಸರಿಪಡಿಸುವುದಾಗಿ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಅರ್ಜಿ ವಿಚಾರಣೆ ನಡೆಸಿದ್ದು, ಚುನಾವಣಾ ಅಧಿಕಾರಿ ಅನಿಲ್ ಮಸೀಹ್ ಅವರು ಎಂಟು ಮತಗಳನ್ನು ಅಸಿಂಧುಗೊಳಿಸಿರುವುದನ್ನು ತಳ್ಳಿ ಹಾಕಿದೆ.

ಮತ ಪತ್ರಗಳು ಹಾಗೂ ಚುನಾವಣಾ ಪ್ರಕ್ರಿಯೆ ವಿಡಿಯೋ ಪರಿಶೀಲಿಸಿದ ಸುಪ್ರೀಂ ಕೋರ್ಟ್, ಮರು ಮತ ಎಣಿಕೆಗೆ ಆದೇಶಿಸಿತ್ತು. ಅಸಿಂಧು ಗೊಳಿಸಲಾದ ಮತಗಳನ್ನೂ ಎಣಿಕೆ ಮಾಡುವಂತೆ ತಿಳಿಸಿತ್ತು. ನಂತರ ಆಮ್ ಆದ್ಮಿ ಪಾರ್ಟಿ - ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

# ಬಂಡೀಪುರ ರಾತ್ರಿ ಸಂಚಾರ ಅನುಮತಿ ಬೇಡ

## ರಾಹುಲ್ ಗಾಂಧಿ ಖುಷಿಗಾಗಿ ಪ್ರಾಣಿಗಳಿಗೆ ತೊಂದರೆ ಎಂದ ವಿಜಯೇಂದ್ರ

ಬೆಂಗಳೂರು, ಫೆ. 20 - ಕೇರಳದ ವಯನಾಡಿನಲ್ಲಿ ಆನೆ ತುಳಿತಕ್ಕೆ ಸಿಲುಕಿ ಮೃತಪಟ್ಟ ವ್ಯಕ್ತಿಗೆ ಕರ್ನಾಟಕ ಸರ್ಕಾರ 15 ಲಕ್ಷ ರೂ. ಪರಿಹಾರ ನೀಡಿರುವುದಕ್ಕೆ ಬಿಜೆಪಿ ಹಾಗೂ ಜೆಡಿಎಸ್ ಟೀಕಾ ಪ್ರಹಾರ ಮುಂದುವರೆಸಿವೆ.

ಈ ನಡುವೆ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಹುಲ್ ಗಾಂಧಿ ಹಾಗೂ ಹೈಕಮಾಂಡ್ ಖುಷಿಪಡಿಸುವ ಸಲುವಾಗಿ ಬಂಡೀಪುರದ ರಾಷ್ಟ್ರೀಯ ಉದ್ಯಾನವನದಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅನುಮತಿ ನೀಡಲು ಪರಿಶೀಲಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಬಂಡೀಪುರದಲ್ಲಿನ ಪ್ರಾಣಿಗಳ ಹಿತಕ್ಕಾಗಿ ರಾತ್ರಿ ವೇಳೆ ವಾಹನ ಸಂಚಾರ ನಿಷೇಧಿಸಲಾಗಿತ್ತು. ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ನಿಷೇಧ ತೆರವಿಗೆ ಕೇರಳದಿಂದ ಒತ್ತಾಯ ಬಂದಾಗಲೂ ಸಮ್ಮತಿಸಿರಲಿಲ್ಲ. ಆದರೆ, ಈಗ ತುರ್ತು ವಾಹನ ಸಂಚರಿಸಲು ಅನುಮತಿ ನೀಡಲು ಅರಣ್ಯ ಸಚಿವ ಈಶ್ವರ ಖಂಡ್ರೆ ಮುಂದಾಗಿದ್ದಾರೆ ಎಂದು ಟೀಕಿಸಿದರು. ತಮ್ಮ ನಾಯಕ ರಾಹುಲ್ ಗಾಂಧಿ ಖುಷಿಪಡಿಸಲು ಕಾಡು ಪ್ರಾಣಿಗಳಿಗೆ ತೊಂದರೆ ನೀಡಲು ತೀರ್ಮಾನಿಸುತ್ತಿರುವುದು ಖಂಡನೀಯ. ಬಂಡೀಪುರದ ಪ್ರಾಣಿಗಳಿಗೆ ತೊಂದರೆ ಕೊಡುವ ನಿರ್ಧಾರ ತೆಗೆದುಕೊಳ್ಳಬಾರದು ಎಂದರು.

ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆ ನೀಡಿದ್ದು, ರಾಜ್ಯದಲ್ಲಿ ಆನೆ ತುಳಿತಕ್ಕೆ ಸಿಲುಕಿ ಸತ್ತವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಅದಕ್ಕೂ ಅಲೆಯಬೇಕು. ಆದರೆ, ಕೇರಳದಲ್ಲಿ ಎಲೆಕ್ಟ್ರಿಕ್ ವೇಗದಲ್ಲಿ 15 ಲಕ್ಷ ರೂ. ನೀಡಲಾಗುತ್ತಿದೆ ಎಂದರು.

ನಮ್ಮ ರೈತರು ಪರಿಹಾರ ಕೇಳಿದರೆ ಕೇವಲ 2 ಸಾವಿರ ರೂ. ಕೊಡುತ್ತಾರೆ. ಅದರಲ್ಲೂ ಶೇ.25 ರಾಜ್ಯದ್ದು ಹಾಗೂ ಶೇ.75 ಕೇಂದ್ರ ಸರ್ಕಾರದ್ದು ಎಂದರು.

ಆದರೆ, ರಾಜ್ಯ ಸರ್ಕಾರ ಪರಿಹಾರ ನೀಡಿರುವುದನ್ನು ಸಮರ್ಥಿಸಿಕೊಂಡಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಕರ್ನಾಟಕದ ಆನೆ ಬಂಡೀಪುರದಿಂದ ಕೇರಳಕ್ಕೆ ಹೋಗಿ ಸಾವು ಸಂಭವಿಸಿದೆ. ನಮ್ಮ ನಾಯಕ ರಾಹುಲ್ ಗಾಂಧಿ ಅವರ ಸಲಹೆ ಮತ್ತು ಮುಖ್ಯಮಂತ್ರಿಗಳ ಅನುಮೋದನೆ ಪಡೆದು ವಿಶೇಷ ಪರಿಹಾರ ನೀಡಿದ್ದೇವೆ ಎಂದರು.

# ಎಸ್.ಎಸ್. ಕೇರ್ ಟ್ರಸ್ಟ್‌ನಿಂದ ಆಂಜನೇಯ ಬಡಾವಣೆಯಲ್ಲಿ ಉಚಿತ ಆರೋಗ್ಯ ತಪಾಸಣೆ




ದಾವಣಗೆರೆ, ಫೆ. 20- ನಗರದಲ್ಲಿ ಆಯೋಜಿಸಲಾಗಿರುವ ಸಂಚಾರಿ ಆರೋಗ್ಯ ಶಿಬಿರಗಳಲ್ಲಿ ಪ್ರಥಮ ಬಾರಿಗೆ ಬಿ.ಪಿ. ಪರೀಕ್ಷೆಗೊಳಗಾದ 100 ಜನರಲ್ಲಿ 30 ಜನರಿಗೆ ಬಿ.ಪಿ. ಅಧಿಕವಾಗಿರುವುದು ಕಂಡು ಬಂದಿದೆ. ನಗರ ಪ್ರದೇಶದಲ್ಲಿಯೇ ಈ ಪರಿಸ್ಥಿತಿಯಾದರೆ, ಗ್ರಾಮೀಣ ಪ್ರದೇಶದ ಪರಿಸ್ಥಿತಿ ಹೇಗಿರಬಹುದು ಎಂದು ಎಸ್.ಎಸ್. ಕೇರ್ ಟ್ರಸ್ಟ್‌ನ ಆಜೀವ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ವಿಷಾದ ವ್ಯಕ್ತಪಡಿಸಿದರು.

ಅವರು ಇಲ್ಲಿನ ಆಂಜನೇಯ ಬಡಾವಣೆಯ ಬಸವೇಶ್ವರ ಉದ್ಯಾನವನದ ಲೈಬ್ರರಿಯಲ್ಲಿ ಸಂಚಾರಿ ಆರೋಗ್ಯ ವಾಹನದಲ್ಲಿ ಆಯೋಜಿಸಲಾಗಿದ್ದ ಆರೋಗ್ಯ ಶಿಬಿರಕ್ಕೆ ಭೇಟಿ ನೀಡಿ ಮಾತನಾಡುತ್ತಿದ್ದರು.

ಈ ಶಿಬಿರಗಳಿಂದ 30 ವರ್ಷಗಳ ನಂತರ ಪ್ರತಿಯೊಬ್ಬರೂ ಬಿ.ಪಿ., ಸಕ್ಕರೆ ಕಾಯಿಲೆ ಪರೀಕ್ಷೆ ಮಾಡಿಸಿಕೊಳ್ಳಬೇಕು ಹಾಗೂ ಆರೋಗ್ಯದ ಬಗ್ಗೆ ಕಾಳಜಿ ಹೆಚ್ಚಾಗಬೇಕು ಎಂಬ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಪ್ರಭಾ ತಿಳಿಸಿದರು.

ಈ ಸಂದರ್ಭದಲ್ಲಿ ಸುಮಾರು 194 ಜನರಿಗೆ ಜ.ಜ.ಮು. ವೈದ್ಯಕೀಯ ವಿದ್ಯಾಲಯದ ನುರಿತ ವೈದ್ಯರಿಂದ ಸಂಪೂರ್ಣ ಆರೋಗ್ಯ ತಪಾಸಣೆ ಹಾಗೂ ಸಮಾಲೋಚನೆ ನಡೆಸಲಾಯಿತು.

ರಕ್ತದ ಸಕ್ಕರೆ ತಪಾಸಣೆ, ಬಿ.ಪಿ ತಪಾಸಣೆ, ಇ.ಸಿ.ಜಿ ಪರೀಕ್ಷೆ, ನೇತ್ರ ತಪಾಸಣೆ, ಹೃದಯ ತಪಾಸಣೆ ಹಾಗು ನುರಿತ ವೈದ್ಯರಿಂದ ಸಂಪೂರ್ಣ ಆರೋಗ್ಯ ತಪಾಸಣೆ, ಉಚಿತ ಔಷಧಿಯೊಂದಿಗೆ ಹೆಚ್ಚಿನ ಚಿಕಿತ್ಸೆಗಾಗಿ ಉಚಿತ ಎಸ್‌ಎಸ್ ಕೇರ್ ಟ್ರಸ್ಟ್ ಕಾರ್ಡ್ ವಿತರಿಸಲಾಯಿತು. ಬಾಪೂಜಿಯ ಮೋದಿ ಆಸ್ಪತ್ರೆಯಲ್ಲಿ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗೆ ಕಾರ್ಡ್ ನೀಡಲಾಯಿತು.

# ಕಾಶ್ಮೀರ : ರೈಲಿಗಾಗಿ ಪ್ರಧಾನಿಗೆ ಫಾರೂಕ್ ಅಬ್ದುಲ್ಲಾ ಅಭಿನಂದನೆ

ಶ್ರೀನಗರ, ಫೆ. 20 - ಜಮ್ಮು ಮತ್ತು ಕಾಶ್ಮೀರದ ಹೊಸ ರೈಲು ಯೋಜನೆಗಳನ್ನು ಉದ್ಘಾಟಿಸಿದ್ದಕ್ಕಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ರೈಲ್ವೆ ಸಚಿವಾಲಯಕ್ಕೆ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅಭಿನಂದಿಸಿದ್ದಾರೆ.

ಜಮ್ಮುವಿನ ಸಂಗಲ್ದನ್ ಹಾಗೂ ಕಾಶ್ಮೀರದ ಬಾರಾಮುಲ್ಲಾ ನಡುವಿನ ಹೊಸ ರೈಲುಗಳಿಗೆ ಹಸಿರು ನಿಶಾನೆ ತೋರಲಾಗಿದೆ. ಹೆದ್ದಾರಿ ಮುಚ್ಚುವುದು ಕಾಶ್ಮೀರದ ಜನರಿಗೆ ದೊಡ್ಡ ಸಮಸ್ಯೆಯಾಗಿತ್ತು. ರೈಲ್ವೆ ಸಂಪರ್ಕ ಈ ಸಮಸ್ಯೆ ನಿವಾರಣೆಗೆ ನೆರವಾಗಲಿದೆ.

ಎಲೆಕ್ಟ್ರಿಕ್ ರೈಲಿನಿಂದ ನಮ್ಮ ಉದ್ಯಮ ಬೆಳೆಯಲಿದೆ. 2007ರಲ್ಲೇ ಈ ಯೋಜನೆ ಪೂರ್ಣವಾಗುವ ನಿರೀಕ್ಷೆ ಇತ್ತು. ಆದರೆ, ನಮ್ಮ ವಲಯ ದುರ್ಗಮವಾಗಿದೆ ಹಾಗೂ ಸುರಂಗಗಳನ್ನು ನಿರ್ಮಿಸಬೇಕಾಯಿತು ಎಂದು ಶ್ರೀನಗರದ ಲೋಕಸಭಾ ಸದಸ್ಯ ಫಾರೂಕ್ ಅಬ್ದುಲ್ಲಾ ಹೇಳಿದ್ದಾರೆ.

# ರಾಣೇಬೆನ್ನೂರು ರೇಣುಕಾ ಅರ್ಬನ್ ಸೊಸೈಟಿ ರಜತ ಮಹೋತ್ಸವ

ರಾಣೇಬೆನ್ನೂರು,ಫೆ.20- ಇಲ್ಲಿನ ಶ್ರೀ ರೇಣುಕಾ ಅರ್ಬನ್ ಕೋ ಆಪ್ ಸೊಸೈಟಿಯ ರಜತ ಮಹೋತ್ಸವ ಸಮಾರಂಭವು ಇದೇ ದಿನಾಂಕ 25ರಂದು ರಾಮಕೃಷ್ಣಾಶ್ರಮದ ಶ್ರೀ ಪ್ರಕಾಶಾನಂದ ಮಹಾರಾಜರ ಸಾನ್ನಿಧ್ಯದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ವಿ.ಪಿ.ಲದ್ವಾ ವಹಿಸುವರು. ಶಾಸಕ ಪ್ರಕಾಶ ಕೋಳಿವಾಡ ಉದ್ಘಾಟಿಸುವರು. ಅತಿಥಿಗಳಾಗಿ ಮಾಜಿ ಶಾಸಕ ಅರುಣಕುಮಾರ ಪೂಜಾರ, ವರ್ತಕ ಬಸವರಾಜ ಪಟ್ಟಣಶೆಟ್ಟಿ, ಸಹಕಾರ ಸಂಘಗಳ ಉಪನಿಬಂಧಕ ಅಜ್ಮತ್‌ವುಲ್ಲಾ ಖಾನ್, ಸಹಾಯಕ ನಿಬಂಧಕ ವಿಕ್ರಮ ಕುಲ್ಕರ್ಣಿ ಭಾಗವಹಿಸುವರು ಎಂದು ಅಧ್ಯಕ್ಷ ವಿ.ಪಿ. ಲದ್ವಾ ತಿಳಿಸಿದ್ದಾರೆ.

# ಸರ್ವಜ್ಞ ಸಮಸಮಾಜದ ಸಾಕ್ಷಿಪ್ರಜ್ಞೆ



**ದಾವಿವಿಯಲ್ಲಿ ನಡೆದ ಸರ್ವಜ್ಞ ತ್ರಿಪದಿಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರೊ. ಚಿತ್ತಯ್ಯ ಪೂಜಾರ**

ದಾವಣಗೆರೆ, ಫೆ.20- ಮಹಾತ್ಮರ ವಿಚಾರಧಾರೆಗಳು ಸಮಾಜದ ಕನ್ನಡಿ ಇದ್ದಂತೆ. ಅವರ ತತ್ವ, ಆದರ್ಶ, ಸಂದೇಶಗಳ ವಿಚಾರಗಳು ಉತ್ತಮ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶಿ ಸೂತ್ರಗಳಾಗಿವೆ. ಇದಕ್ಕೆ ಸರ್ವಜ್ಞ ನಮ್ಮೆಲ್ಲರ ನಡುವಿನ ಸಮಸಮಾಜದ ಸಾಕ್ಷಿಪ್ರಜ್ಞೆಯಾಗಿದ್ದಾರೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಚಿತ್ತಯ್ಯ ಪೂಜಾರ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ ಸರ್ವಜ್ಞ ಅಧ್ಯಯನ ಕೇಂದ್ರದ ವತಿಯಿಂದ ಸರ್ವಜ್ಞ ಜಯಂತಿ ಪ್ರಯುಕ್ತ ಪುಸ್ತಕ ಬಿಡುಗಡೆ ಸಮಾರಂಭ ಮತ್ತು ಸರ್ವಜ್ಞ ತ್ರಿಪದಿಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸರ್ವಜ್ಞ ಬೀಡಾಡಿಯಾಗಿ ರಲಿಲ್ಲ, ನಾಡಾಡಿಯಾಗಿದ್ದರು. ಆಡುಮಾತಿನ ಪದ ಬಳಕೆಯ ಮೂಲಕ ಜನರ ವಿಚಾರಗಳನ್ನು ಜನರಿಗೆ ತಿಳಿಸಿ ಸಮಾಜ ತಿದ್ದುವ ಕೆಲಸ ಮಾಡಿದ ಮಹಾನ್ ವ್ಯಕ್ತಿ ಎಂದು ತಿಳಿಸಿದರು.

ಸರ್ವಜ್ಞನ ತ್ರಿಪದಿಗಳಲ್ಲಿರುವ ವಿಚಾರಗಳನ್ನು, ಸೂಕ್ಷ್ಮ ಸಂದೇಶಗಳನ್ನು, ಮುಕ್ತ ಅನಿಸಿಕೆಗಳನ್ನು ಅವಲೋಕಿಸಿ ದಾಗ ಸಮಾಜದ ವಾಸ್ತವದ ಚಿತ್ರಣ ತೆರೆದುಕೊಳ್ಳುತ್ತದೆ. ನೇರವಾಗಿ, ದಿಟ್ಟ ತನದಿಂದ ಯಾರ ಭೀತಿಗೂ ಮಣೆ ಹಾಕದೆ ತನ್ನ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ದೇಸಿ ಸಾಹಿತ್ಯದಲ್ಲಿ ಇಂತಹ ಪ್ರಭಾವಿ ವ್ಯಕ್ತಿಗಳ ಬಗ್ಗೆ, ಅವರ ವಿಚಾರಗಳ ಬಗ್ಗೆ ಅಧ್ಯಯನಗಳ ಅಗತ್ಯವಿದೆ. ನಮ್ಮ ಸುತ್ತ ಮುತ್ತಲಿರುವ ಸರ್ವಜ್ಞನಂತಹ ವ್ಯಕ್ತಿಗಳ ಕುರಿತು ಅಧ್ಯಯನ, ಸಂಶೋಧನೆಗಳನ್ನು ನಡೆಸಿ ಪ್ರಚಲಿತಗೊಳಿಸುವ ಕೆಲಸ ಆಗಬೇಕಾಗಿದೆ ಎಂದು ಹೇಳಿದರು.

ಅಧ್ಯಯನಗಳು ಸುಳ್ಳು ಇತಿಹಾಸ ವನ್ನು ನಂಬಬಾರದು. ಸಂಶೋಧನೆ, ಅಧ್ಯಯನದ ಮೂಲಕ ವಾಸ್ತವವನ್ನು ತಿಳಿಸುವ ಕೆಲಸವಾಗಬೇಕು. ವಿಶ್ವವಿದ್ಯಾಲಯಗಳು ಜ್ಞಾನಿಗಳನ್ನು ಬಿತ್ತಿ ಜ್ಞಾನವನ್ನು ಬೆಳೆಯುವ ಭೂಮಿಕೆಯಾಗ ಬೇಕು. ಉಪನ್ಯಾಸದ ಜೊತೆಗೆ ಸಂಶೋ ಧನಾ ಪ್ರಬಂಧಗಳ ಪ್ರಕಟಣೆಯ ಮೂಲಕ ಮುಂದಿನ ಪೀಳಿಗೆಗೆ ಅಧ್ಯಯನಕ್ಕೆ ಆಕರಗಳನ್ನು ಒದಗಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಮಾತನಾಡಿ, ಸಮಾಜದ ಅಂಕುಕೊಂಡು ತಿದ್ದುತ್ತ, ಬಡವರು- ದುರ್ಬಲರ ನೋವಿಗೆ ಸ್ಪಂದಿಸುವ ಧ್ವನಿಯಾಗಿದ್ದ ಸರ್ವಜ್ಞ ದಿಟ್ಟ ನಿಲುವಿನ ಪ್ರಬುದ್ಧ ವ್ಯಕ್ತಿಯಾಗಿದ್ದರು. ಕಬೀರ, ನಾರಾಯಣಗುರು, ತಿರುವಳ್ಳಾರ್ ಮಾದರಿಯಲ್ಲಿ ತ್ರಿಪದಿಗಳ ಮೂಲಕ ತಮ್ಮ ತತ್ವ, ವಿಚಾರಗಳನ್ನು ಬೋಧಿಸಿದ ಸರ್ವಜ್ಞನಿಗೂ ಬುದ್ಧ, ಬಸವ, ಅಂಬೇಡ್ಕರ್‌ಗೆ ಸಿಕ್ಕಂತಹ ಮನ್ನಣೆಗಳು ದೊರೆಯಬೇಕಾಗಿದೆ ಎಂದರು.

ಶಾಲಾ ಹಂತದಲ್ಲಿ ಸಂಕ್ಷಿಪ್ತವಾಗಿ ವ್ಯಕ್ತಿ ಪರಿಚಯ ಮಾಡಿಕೊಂಡರೂ, ಪದವಿ ಮತ್ತು ಸ್ನಾತಕ ಪದವಿಯಲ್ಲಿ ಸಮಗ್ರ ಅಧ್ಯಯನಕ್ಕೆ ಪೂರಕವಾದ ಪಠ್ಯಕ್ರಮ ಅಳವಡಿಸಿಕೊಳ್ಳಬೇಕಾಗಿದೆ. ಆ ಮೂಲಕ ವಿದ್ಯಾರ್ಥಿಗಳು ಹೆಚ್ಚು ಸಂಶೋಧನಾತ್ಮಕವಾಗಿ ಅಧ್ಯಯನಶೀಲರಾಗಲು, ಚಿಂತನಶೀಲರಾಗಿ ವಿಚಾರ ಮಂಡಿಸಲು ಸಾಧ್ಯವಾಗುತ್ತದೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಸರ್ವಜ್ಞನ ತ್ರಿಪದಿಗಳನ್ನು ಕುರಿತ ಸಂಶೋಧನಾ ಲೇಖನಗಳ ಪುಸ್ತಕಗಳನ್ನು ಕುಲಪತಿ ಪ್ರೊ. ಕುಂಬಾರ ಅವರು ಬಿಡುಗಡೆ ಮಾಡಿದರು.

ಕನ್ನಡ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕ ಡಾ.ಎಚ್.ವಿಶ್ವನಾಥ ಪುಸ್ತಕ ಪರಿಚಯ ಮಾಡಿದರು. ಸರ್ವಜ್ಞ ಅಧ್ಯಯನ ಪೀಠದ ಸಂಯೋಜನಾಧಿಕಾರಿ ಮತ್ತು ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಜಯರಾಮಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕುಲಸಚಿವ ಪ್ರೊ.ವೆಂಕಟರಾವ್ ಪಲಾಟೆ, ಪರೀಕ್ಷಾಂಗ ಕುಲಸಚಿವ ಪ್ರೊ. ಸಿ.ಕೆ.ರಮೇಶ, ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡ್ರ ಉಪಸ್ಥಿತರಿದ್ದರು.

ಡಾ.ಜೋಗಿನಕಟ್ಟೆ ಮಂಜುನಾಥ ಸ್ವಾಗತಿಸಿದರು. ಸಂಶೋಧನಾ ವಿದ್ಯಾರ್ಥಿ ರುಜುವಾನ ಕಾರ್ಯಕ್ರಮ ನಿರೂಪಿಸಿದರು. ಮಂಜುಳಾ ಎಂ.ಎಲ್ ವಂದಿಸಿದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ, ಎ ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಬಸವೇಶ್ವರ ಬಡಾವಣೆ, ಬಾಪೂಜಿ ಎಂಬಿಎ ಕಾಲೇಜು, ಅಥಣಿ ಕಾಲೇಜ್, ಕುಂದುವಾಡ ಕೆರೆ, ಶಾಮನೂರು ರಸ್ತೆ, ಎಸ್. ಎಸ್ ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ, ಎಂ.ಸಿ.ಸಿ ಬಿ. ಬ್ಲಾಕ್, ಬಿ.ಐ.ಇ.ಟಿ ರಸ್ತೆ, ಗ್ಲಾಸ್ ಹೌಸ್ ಏರಿಯಾ, ನಿಜಲಿಂಗಪ್ಪ ಬಡಾವಣೆ ಎ ಮತ್ತು ಬಿ ಬ್ಲಾಕ್, ರಿಂಗ್ ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಶಾಮನೂರು ರಸ್ತೆ, ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪ ಮತ್ತು ಸುತ್ತ ಮುತ್ತ ಬೆಳಿಗ್ಗೆ 10 ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ**

ಲೋಕಿಕೆರೆ ರಸ್ತೆ, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ

ಮೊ : 9141013066, 9448990397

ಸಂ.ಕರಾಬೀನಿ/ಉ.ವ್ಯ/363/2023-24 ದಿನಾಂಕ : 20.02.2024

**ಸಾಗಾಣಿಕೆ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ದಾವಣಗೆರೆ ಕೇಂದ್ರದಿಂದ ಕರ್ನಾಟಕ ರಾಜ್ಯದಲ್ಲಿರುವ ನಿಗಮದ ವಿವಿಧ ಕೇಂದ್ರಗಳಿಗೆ ಹಾಗೂ ದಾವಣಗೆರೆ ಜಿಲ್ಲೆಯ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಿಗೆ ಬಿತ್ತನೆ ಬೀಜ ಹಾಗೂ ಪೊಟ್ಟಣ ಸಾಮಾಗ್ರಿಗಳ ದಾಸ್ತಾನನ್ನು 2024-25 ನೇ ಸಾಲಿಗೆ ಸಾಗಾಣಿಕೆ ಮಾಡಲು ಮುಖ್ಯ ಕಛೇರಿಯ ಸುತ್ತೋಲೆ ಕರಾಬೀನಿ/ಎಮ್ ಪಿಡಿಸಿ/4489/2023-24 ದಿನಾಂಕ:15.02.2024ರ ಪ್ರಕಾರ ವಾರ್ಷಿಕ ಸಾರಿಗೆ ದರ ಗುತ್ತಿಗೆಗಾಗಿ ನೋಂದಾಯಿತ/ಸ್ವಂತ ಸಾಗಾಣಿಕೆ ವಾಹನವನ್ನು ಹೊಂದಿರುವ ಸಾರಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ನಲ್ಲಿ ಭಾಗವಹಿಸುವ ಸಾರಿಗೆದಾರರು ರೂ.112/-ಗಳನ್ನು ನಗದು ಅಥವಾ ಡಿ.ಡಿ ಮೂಲಕ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ದಾವಣಗೆರೆ ಇವರಿಗೆ ಪಾವತಿಸುವಂತೆ ಸಲ್ಲಿಸಿ, ಟೆಂಡರ್ ಫಾರಂಗಳನ್ನು ದಿನಾಂಕ:21.02.2024 ರಿಂದ ದಿನಾಂಕ:26.02.2024ರ ವರೆಗೆ ನಿಗಮದ ದಾವಣಗೆರೆ ಕಚೇರಿಯಿಂದ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ:07.03.2024ರ ಮಧ್ಯಾಹ್ನ 2.30ರ ಒಳಗೆ ಸಲ್ಲಿಸುವುದು. ಸ್ವೀಕೃತ ಟೆಂಡರ್ ಫಾರಂಗಳನ್ನು ಟೆಂಡರುದಾರರ ಸಮ್ಮುಖದಲ್ಲಿ ಅದೇ ದಿನ ಅಂದರೆ ದಿನಾಂಕ:07.03.2024ರಂದು ಮಧ್ಯಾಹ್ನ 2.30 ಗಂಟೆ ನಂತರ ತೆರೆಯಲಾಗುವುದು.

**ಉಪ ವ್ಯವಸ್ಥಾಪಕರು (ಕಾ)**
ಕರಾಬೀನಿ ದಾವಣಗೆರೆ



**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ**
**ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ**

ಟೆಂಡರ್ ಸಂಖ್ಯೆ: ಪ್ರಾಕೃಪಸಸನಿ/ಶಿಹೋದಾ/ವಾಸಂಮಕನಿ/ಟೆಂಡರ್/2023-24
ದಿನಾಂಕ :12-02-2024

**ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಮೂಲಕ)**

2023-24ನೇ ಸಾಲಿನಲ್ಲಿ ಹನ್ನೆರಡು ವಾಣಿಜ್ಯ ಸಂಕೀರ್ಣ ಮಳಿಗೆಗಳ ಕಟ್ಟಡ ನಿರ್ಮಾಣಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಮ್ಯಾನುವಲ್ ಟೆಂಡರ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. (1) ಖಾಲಿ ಟೆಂಡರ್ ದಾಖಲಾತಿಗಳಿಗಾಗಿ ಅರ್ಜಿ ಸ್ವೀಕರಿಸುವ ಹಾಗೂ ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 12-02-2024 ರಿಂದ 26-02-2024ರ ಸಂಜೆ 5-00 ಗಂಟೆಯವರೆಗೆ (2) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ 27-03-2024ರ ಬೆಳಿಗ್ಗೆ 11-00 ಗಂಟೆಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ (3) ಆರ್ಥಿಕ ಲಕೋಟೆ ತೆರೆಯುವ ದಿನಾಂಕ 27-03-2024 ಮಧ್ಯಾಹ್ನ 02-00 ಗಂಟೆಗೆ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ) (4) ಟೆಂಡರ್‌ಗೆ ಇಡಲಾದ ಒಟ್ಟು ಅಂದಾಜು ಮೊತ್ತ ರೂ. 75.19 ಲಕ್ಷಗಳು. ಹೆಚ್ಚಿನ ಮಾಹಿತಿಗಾಗಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಸಂಪರ್ಕಿಸುವುದು.

**ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಶಿರಮಗೊಂಡನಹಳ್ಳಿ,
ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ



SVE Society's

**DEVIKA P U SCIENCE AND COMMERCE COLLEGE RANEBENNUR**

Estd in 2007

**WANTED**

The applications are invited for the following Lecturers posts

| Sl. No | Name of the post | No of Vacancies | Qualification | Experience |
|---|---|---|---|---|
| 1 | Lecturer in Biology | 2 | M.sc B.ED | Minimum 5 years |
| 2 | Lecturer in Chemistry | 2 | M.sc B.ED | 5 years |
| 3 | Lecturer in Mathematics | 2 | M.sc B.ED | 5 years |
| 4 | Lecturer in Physics | 2 | M.sc B.ED | 5 years |
| 5 | Lecturer in English | 1 | MA B.ED | 5 years |

The candidates are required to take classes for I ,II Year P.U Board syllabus and NEET/JEE/CET competitive exams. The eligible candidates may submit their resume to the following address on or before 1-3-2024. Attractive salary will be given based on their experience and fluency in English. Candidates with higher qualification like Phd will also be considered.

Place: Ranebennur
Date : 20-02-2024

Sd/- C.R.Patil, Chairman
Devika P U College Ranebennur

## ಮಲೇಬೆನ್ನೂರಿನಲ್ಲಿ ಇಂದು - ನಾಳೆ 'ಗಂಧ-ಉರುಸು' ಹಬ್ಬ



ಮಲೇಬೆನ್ನೂರು,ಫೆ.20- ಪಟ್ಟಣದಲ್ಲಿ ನಾಳೆ ದಿನಾಂಕ 21 ಮತ್ತು 22ರಂದು ಜರುಗಲಿರುವ ಹಜರತ್ ಸೈಯ್ಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಗಂಧ ಹಾಗೂ ಉರುಸು ಅಂಗವಾಗಿ ಶುಕ್ರವಾರ ಸಂಜೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಆರಂಭದಲ್ಲಿ ಮಾತನಾಡಿದ ಮಲೇಬೆನ್ನೂರು ಪಿಎಸ್ಐ ಪ್ರಭು ಕೆಳಗಿನಮನೆ, ಉರುಸುಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುತ್ತಿರುವುದರಿಂದ ಅಗತ್ಯ ಕ್ರಮ ಗಳನ್ನು ತೆಗೆದುಕೊಳ್ಳಲು ಉರುಸು ಕಮಿಟಿಯವರು ಸಹಕರಿಸಬೇಕು ಎಂದು ಕೇಳಿಕೊಂಡರು.

ಈ ವೇಳೆ ಮಾತನಾಡಿದ ಉರುಸು ಕಮಿಟಿ ಅಧ್ಯಕ್ಷ ಎಂ.ಬಿ.ಕುರ್ಬಾನ್ ಅಲಿ, ನಾಳೆ ದಿನಾಂಕ 21ರ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 10ರವರೆಗೆ ಪಟ್ಟಣದಲ್ಲಿ ಗಂಧದ ಮೆರವಣಿಗೆ ನಡೆಯಲಿದ್ದು, 22ರಂದು ರಾತ್ರಿ 10 ಗಂಟೆಗೆ ಪ್ರಸಿದ್ಧ ಖವ್ವಾಲರಿಂದ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಪುರಸಭೆ ಸದಸ್ಯರಾದ ಖಲೀಲ್, ನಯಾಜ್, ಮುಖಂಡರಾದ ಶೇರ್ ಅಲಿ, ಖುದ್ದೂಸ್, ಸೈಯದ್ ಜಾಕೀರ್, ಪುರಸಭೆ ಸದಸ್ಯ ಕೆ.ಜಿ.ಲೋಕೇಶ್, ಕೆ.ಪಿ. ಗಂಗಾಧರ್, ಪಿ.ಆರ್.ರಾಜು, ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್, ಸಿಪಿಐ ಸುರೇಶ್ ಸಗರಿ ಮಾತನಾಡಿದರು.

ಗ್ರಾಮಾಂತರ ಡಿವೈಎಸ್ಪಿ ಪ್ರಶಾಂತ್ ಸಿದ್ದನಗೌಡರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಬಿ.ರಫೀವುಲ್ಲಾ, ಶಕ್ತಿ ಸಾಮಿಲ್ ಮುನ್ನಾ, ಎಂ.ಬಿ. ರುಸ್ತುಂ, ಇರ್ಫಾನ್ ಖಾನ್, ಹಬೀಬುಲ್ಲಾ, ಶಾಬುದ್ದೀನ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು. ಎಎಸ್ಐ ಶ್ರೀನಿವಾಸ ಸ್ವಾಗತಿಸಿದರು.

## ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಉದ್ಯಮಿಗಳು ಮುಂದಾಗಲಿ



ಮಲೇಬೆನ್ನೂರು, ಜ.20- ಬೆಂಗಳೂರಿನಲ್ಲಿ ಸರ್ಕಾರಿ ಶಾಲೆಗಳನ್ನು ಬಹು ರಾಷ್ಟ್ರೀಯ ಕಂಪನಿಗಳು ಮತ್ತು ಉದ್ಯಮಿಗಳು ಅಭಿವೃದ್ಧಿಪಡಿಸಿದಂತೆ ಹರಿಹರ ತಾಲ್ಲೂಕಿನಲ್ಲೂ ವರ್ತಕರು, ಉದ್ಯಮಿಗಳು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಮನವಿ ಮಾಡಿದರು.

ಅವರು ಗುರುವಾರ ಪಟ್ಟಣದ ಪಿಡಬ್ಲ್ಯೂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಕೃತಗ್ಯತಾ ಟ್ರಸ್ಟ್ ನೀಡಿದ ಧ್ವನಿವರ್ಧಕ ಮತ್ತು ಮಾರುತಿ ಮೆಡಿಕಲ್ಸ್ ನೀಡಿದ ನೋಟ್ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿ ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿಗಳೂ ನಡೆಯುತ್ತಿದ್ದು, ಕ್ಷೀರ ಭಾಗ್ಯ, ಬಾಳೇಹಣ್ಣು, ಶೇಂಗಾಚಿಕ್ಕಿ, ಸಮವಸ್ತ್ರ, ವಿದ್ಯಾರ್ಥಿ ವೇತನಗಳನ್ನು ನೀಡುತ್ತಿದ್ದರೂ ಸಹ ಹಾಜರಾತಿ ಕ್ಷೀಣಿಸುತ್ತಿರುವುದು ಪೋಷಕರ ಇಂಗ್ಲಿಷ್ ವ್ಯಾಮೋಹದಿಂದ ಎಂದು ವಿಷಾದಿಸಿದರು.

**ಮಲೇಬೆನ್ನೂರಿನಲ್ಲಿ ಬಿಇಓ ಹನುಮಂತಪ್ಪ ಮನವಿ**

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ, ವಿವಿಧ ಶಾಲೆಗಳ ಶಿಕ್ಷಕರಾದ ರಾಘವೇಂದ್ರ, ಪೀರುನಾಯ್ಕ್, ಆನಂದ್, ಮಲ್ಲಿಕಾರ್ಜುನ್, ಪಿಡಬ್ಲ್ಯೂಡಿ ಶಾಲೆಯ ಮುಖ್ಯ ಶಿಕ್ಷಕ ಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್, ಎಸ್‌ಡಿಎಂಸಿ ಸದಸ್ಯರುಗಳು ಹಾಜರಿದ್ದರು. ನೇತ್ರಾವತಿ ನಿರೂಪಿಸಿದರು. ಶಿಕ್ಷಕ ಶಿವಕುಮಾರ್ ವಂದಿಸಿದರು.

## ತೋಳಹುಣಸೆ ಶಾಲೆಯಲ್ಲಿ 'ಸ್ಪಿಕ್ ಮ್ಯಾಕೆ' ಕೂಡಿಯಾಟಂ ಅಭಿನಯ ಪ್ರದರ್ಶನ



ದಾವಣಗೆರೆ, ಫೆ.20- ನಗರದ ಹೊರ ವಲಯದಲ್ಲಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ 'ಸ್ಪಿಕ್ ಮ್ಯಾಕೆ' ಪ್ರಾಯೋಜಕತ್ವದಲ್ಲಿ ಕೂಡಿಯಾಟಂ ಅಭಿನಯ ಪ್ರದರ್ಶನ ಆಯೋಜಿಸಲಾಗಿತ್ತು.

ಈ ಅಭಿನಯ ಪ್ರಕಾರವು ಸಂಸ್ಕೃತದಲ್ಲಿ ರೂಪಿತವಾಗಿದ್ದು, ಹೆಚ್ಚಾಗಿ ಕೇರಳ ರಾಜ್ಯದಲ್ಲಿ ಪ್ರಚಲಿತದಲ್ಲಿದೆ ಮತ್ತು ದೇವಸ್ಥಾನಗಳಲ್ಲಿ ಹೆಚ್ಚಾಗಿ ಪ್ರದರ್ಶಿಸಲ್ಪಡುತ್ತದೆ. ಇದಕ್ಕೆ ಸುಮಾರು 2000 ವರ್ಷಗಳ ಇತಿಹಾಸವಿದ್ದು, ಇದು ವಿಶ್ವಸಂಸ್ಥೆಯ ಸಾಂಸ್ಕೃತಿಕ ಅಂಗ ಯುನೆಸ್ಕೋದಿಂದ ಮಾನವೀಯತೆ ಪರಂಪರೆಯ ಸಾಕಾರ ಎಂಬ ಪ್ರಶಂಸೆಯನ್ನು ಪಡೆದಿದೆ ಎಂದು ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ವಿಭಾಗದ ಸ್ಪಿಕ್ ಮ್ಯಾಕೆ ಮುಖ್ಯಸ್ಥರು ಮತ್ತು ಶಾಲೆಯ ಮುಖ್ಯಸ್ಥರಾದ ಮಂಜುನಾಥ ರಂಗರಾಜು ಅವರು ತಿಳಿಸಿದರು.

ಶಾಲೆಯ ಶ್ರೀ ಗಣೇಶ್ ಸಭಾಂಗಣದಲ್ಲಿ ಪ್ರಸಿದ್ಧ ಕಲಾವಿದರಾದ ಮಾರಿ ಮಧು, ಶ್ರೀಮತಿ ಇಂದು ಜಿ. ನಾಯರ್, ಮಣಿಕಂಠನ್, ಜಿನೇಶ್ ಚಾಕ್ಯಿಯಾರ್, ರಾಜನ್, ಶ್ರೀಜಿತ್ ಮುಂತಾದವರು ಕಲಾಕೌಶಲ್ಯವನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ಮುದಗೊಳಿಸಿದರು.

ಪ್ರಾಚಾರ್ಯರಾದ ಅರುಣ್ ಪ್ರಸಾದ್ ಮತ್ತು ರಾಜೇಶ್ ಪ್ರಸಾದ್, ಉಪ ಪ್ರಾಂಶುಪಾಲ ಉಮಾಪತಿ ಎಚ್.ಜಿ ಮತ್ತಿತರರು ಉಪಸ್ಥಿತರಿದ್ದರು. ಶಿಕ್ಷಕಿ ಶ್ರೀಮತಿ ಎಂ. ಲಕ್ಷ್ಮಿ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು.

## ಅಸಹಕಾರದ ನಡುವೆಯೂ ಅಭಿವೃದ್ಧಿ

**(1ನೇ ಪುಟದಿಂದ)** ಹೋಗಿದ್ದ ಬಿಜೆಪಿಯನ್ನು ರಾಜ್ಯದ ಜನತೆ ತಿರಸ್ಕರಿಸಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿ ಇವತ್ತಿನವರೆಗೂ ಬಿಜೆಪಿ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದೇ ಇಲ್ಲ, ಹಿಂಬಾಗಿಲಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಬಿಜೆಪಿಯಿಂದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್, ಸದಾನಂದಗೌಡ ಮುಖ್ಯಮಂತ್ರಿ ಆದರು, ಇವರ್ಯಾರೂ ಸ್ಪಷ್ಟ ಬಹುಮತ ಪಡೆದು ಮುಖ್ಯಮಂತ್ರಿ ಆದವರಲ್ಲ, ಆಪರೇಷನ್ ಕಮಲ ಮತ್ತು ಹಿಂಬಾಗಿಲ ಮೂಲಕ ಆಮಿಷವೊಡ್ಡಿ ಇತರೆ ಪಕ್ಷದ ಶಾಸಕರನ್ನು ಸೆಳೆದು ಅಧಿಕಾರಕ್ಕೇರಿದರು ಎಂದರು.

ನಾವು 2013 ಹಾಗೂ 2023ರಲ್ಲಿ ಸ್ಪಷ್ಟ ಬಹುಮತದ ಮೂಲಕ ಅಧಿಕಾರಕ್ಕೆ ಬಂದಿದ್ದೇವೆ, ಜನ ನಮ್ಮನ್ನು ತಿರಸ್ಕರಿಸಿ ವಿರೋಧ ಪಕ್ಷದಲ್ಲಿ ಕೂರಿಸಿದಾಗಲೂ ತಲೆಬಾಗಿ ಜನರ ತೀರ್ಮಾನವನ್ನು ಒಪ್ಪಿಕೊಂಡು ರಚನಾತ್ಮಕ ವಿರೋಧ ಪಕ್ಷವಾಗಿ ಕೆಲಸ ಮಾಡಿ ಮತ್ತೆ ಅಧಿಕಾರಕ್ಕೆ ಬಂದಿದ್ದೇವೆ ಎಂದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕೇಂದ್ರದ ಜತೆ ಸಂಘರ್ಷಕ್ಕೆ ಇಳಿಯಬಾರದು ಎಂದಿದ್ದಾರೆ, ನಾವು ಸಂಘರ್ಷಕ್ಕೆ ಇಳಿದಿಲ್ಲ, ರಾಜ್ಯದ ಪಾಲಿನ ಸಂವಿಧಾನಬದ್ಧ ಹಕ್ಕು, ಅನುದಾನ ಕೇಳುವುದು ಸಂಘರ್ಷ ಆಗುವುದಿಲ್ಲ ಎಂದು ಸಮರ್ಥಿಸಿಕೊಂಡರು.

## ರಾಣೇಬೆನ್ನೂರು : ಮಾರ್ಕಂಡೇಯ ಮಹರ್ಷಿಗಳ ಜಯಂತಿ, ತೊಟ್ಟಿಲೋತ್ಸವ



ರಾಣೇಬೆನ್ನೂರು, ಫೆ.20- ಇಲ್ಲಿನ ಶ್ರೀ ಸಿದ್ದೇಶ್ವರ ನಗರದಲ್ಲಿರುವ ಶ್ರೀ ಗುರು ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ನಿನ್ನೆ ಶ್ರೀ ಗುರು ಮಾರ್ಕಂಡೇಶ್ವರ ಮಹರ್ಷಿಗಳ ಅಭಿಷೇಕ, ಪೂಜಾ ಕಾರ್ಯಕ್ರಮಗಳು ಪದ್ಮಶಾಲಿ ಸಮಾಜದ ಪೀಠಾಧ್ಯಕ್ಷರಾದ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಗುರು ಮಠ ಮಹಾಸಂಸ್ಥಾನ ತುಮ್ಮಿನಕಟ್ಟಿಯ ಶ್ರೀ ಪ್ರಭುಲಿಂಗ ಮಹಾಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು.

ಸುಮಂಗಲಿಯರು ಗಂಗಾಮಾತೆ ಪೂಜೆಯನ್ನು ನೆರವೇರಿಸಿ, ಜಲ ಕುಂಭವನ್ನು ಮೆರವಣಿಗೆಯಿಂದ ತೆಗೆದುಕೊಂಡು ಬಂದ ನಂತರ ಶ್ರೀ ಮಾರ್ಕಂಡೇಶ್ವರ ಸ್ವಾಮಿ ಹಾಗೂ ಶ್ರೀ ಕ್ಷೇತ್ರದ ಎಲ್ಲಾ ದೇವಾನು ದೇವತೆಗಳ ಅಭಿಷೇಕ ಹಾಗೂ ಪೂಜೆ ಅಲಂಕಾರಗಳು ನಡೆದವು.

ಸುಮಂಗಲಿಯವರಿಗೆ ಅರಿಶಿಣ ಕುಂಕುಮ ಮಂಗಳ ದ್ರವ್ಯಗಳಿಂದ ಉಡಿ ತುಂಬುವ ಗೌರವಾರ್ಪಣೆಯನ್ನು ನಡೆಸಲಾಯಿತು. ಶ್ರೀ ಮಾರ್ಕಂಡೇಶ್ವರ ಸ್ವಾಮಿ ತೊಟ್ಟಿಲೋತ್ಸವವನ್ನು ಹಾಡುಗಳ ಮುಖಾಂತರ ನಾಮಕರಣ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ನಾಗರಾಜ ಅ. ಅಗಡಿ, ಉಪಾಧ್ಯಕ್ಷ ಹನುಮಂತಪ್ಪ ಟಿ. ಮುಕ್ತೇನಹಳ್ಳಿ, ಲಕ್ಷ್ಮಣ ಕಡ್ಲಿಬಾಳ, ಪರಶುರಾಮ ಅಗಡಿ, ನಾಗರಾಜ ದೇವರಡ್ಡಿ, ಕೆ. ಕೆ. ಹಳ್ಳಳ್ಳಿ , ಶಂಕ್ರಣ್ಣ ಗರಡಿಮನಿ, ರೇವಣಪ್ಪ ಗುತ್ತೂರು, ಪ್ರವೀಣ ಗುತ್ತೂರು, ಮಾರುತಿ ಗರಡಿಮನಿ, ಬಸವರಾಜ ಐರಣಿ, ರವಿ ಕಿಚಡಿ, ಕರಿಬಸಪ್ಪ ಕಡ್ಲಿಬಾಳ, ಮಲ್ಲಿಕಾರ್ಜುನ ಮಾಗೇನಹಳ್ಳಿ, ಗಣೇಶ ಹುಲ್ಲತ್ತಿ, ಗದುಗೆಪ್ಪ ವಾಸನ, ಎಲ್ಲಪ್ಪ ಗುತ್ತಲ, ತಿಪ್ಪೇಶ ಅಗಡಿ ರಾಮಣ್ಣ ಗುತ್ತಲ ನಾಗರಾಜ ಕಾಸಲ, ವೆಂಕಟೇಶ ಪೆನಗೊಂಡಲ, ಚನ್ನಬಸಮ್ಮ ಕಾಮಣ್ಣನವರ, ದ್ರಾಕ್ಷಾಯಣಿ ಮುಕ್ತೇನಹಳ್ಳಿ, ಕವಿತಾ ಶೆಟ್ಟಿ, ಶಶಿಕಲಾ ಬಂಡೇಕಲ್, ಪ್ರೇಮಾ ಶೆಟ್ಟಿ, ರುದ್ರಮ್ಮ ಮತ್ತಿತರರು ಉಪಸ್ಥಿತರಿದ್ದರು.

## ಮೂರು ಐ.ಐ.ಎಂ. ಕ್ಯಾಂಪಸ್‌ಗಳ ಉದ್ಘಾಟನೆ

ನವದೆಹಲಿ, ಫೆ. 20 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜಮ್ಮು, ಬೋಧ್ ಗಯಾ ಹಾಗೂ ವಿಶಾಖಪಟ್ಟಣಂಗಳಲ್ಲಿರುವ ಮೂರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕ್ಯಾಂಪಸ್‌ಗಳನ್ನು ಉದ್ಘಾಟಿಸಿದ್ದಾರೆ. ಇದೇ ವೇಳೆ ಮೂರು ಐ.ಐ.ಟಿ. ಕ್ಯಾಂಪಸ್, 20 ಕೇಂದ್ರೀಯ ವಿದ್ಯಾಲಯ ಹಾಗೂ 13 ನವೋದಯ ಶಾಲೆಗಳಿಗೆ ಶಿಲಾನ್ಯಾಸ ನೆರವೇರಿಸಿದ್ದಾರೆ.

ಜಮ್ಮುವಿನ ಮೌಲಾನಾ ಆಜಾದ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಪ್ರಧಾನಿ ಶಿಲಾನ್ಯಾಸ ಹಾಗೂ ಉದ್ಘಾಟನೆಗಳನ್ನು ನೆರವೇರಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿ ದೂರದ ಮಾತಾಗಿತ್ತು. ತಮ್ಮ ಸರ್ಕಾರ ಈಗಿನ ಹಾಗೂ ಮುಂದಿನ ಪೀಳಿಗೆಗಳಿಗಾಗಿ ಆಧುನಿಕ ಶಿಕ್ಷಣಕ್ಕಾಗಿ ಅತಿ ಹೆಚ್ಚಿನ ಹಣ ವೆಚ್ಚ ಮಾಡುತ್ತಿದೆ ಎಂದು ಮೋದಿ ಹೇಳಿದರು.

ಕಳೆದ ಹತ್ತು ವರ್ಷಗಳಲ್ಲಿ ದೇಶದಲ್ಲಿ ದಾಖಲೆ ಸಂಖ್ಯೆಯ ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳನ್ನು ತೆರೆಯಲಾಗಿದೆ ಎಂದೂ ಅವರು ಹೇಳಿದರು.

## ಜಯಲಲಿತಾರ 27 ಕೆಜಿ ಆಭರಣ ತಮಿಳುನಾಡಿಗೆ ಹಸ್ತಾಂತರ



ಬೆಂಗಳೂರು, ಫೆ. 20 - ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಜಯಲಲಿತಾ ಹಾಗೂ ಇತರರ ವಿರುದ್ಧದ ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿಯಾಗಿದ್ದ 27 ಕೆ.ಜಿ. ಬಂಗಾರ ಹಾಗೂ ವಜ್ರದ ಆಭರಣಗಳನ್ನು ತಮಿಳುನಾಡು ಸರ್ಕಾರಕ್ಕೆ ವರ್ಗಾಯಿಸಬೇಕೆಂದು ಇಲ್ಲಿನ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಮಾರ್ಚ್ 6 ಹಾಗೂ 7ರಂದು ಆಭರಣಗಳನ್ನು ವರ್ಗಾಯಿಸುವಂತೆ ನ್ಯಾಯಾಲಯ ತಿಳಿಸಿದೆ. ಇದರಿಂದಾಗಿ 100 ಕೋಟಿ ರೂ. ಮೌಲ್ಯದ ಆಸ್ತಿ ಬಿಡುಗಡೆಯಾಗಲಿದೆ.

20 ಕೆ.ಜಿ. ಆಭರಣಗಳನ್ನು ಮಾರಲು ಇಲ್ಲವೇ ಹರಾಜು ಹಾಕಲು ಕ್ರಮ ತೆಗೆದುಕೊಳ್ಳಲಾಗುವುದು. ಉಳಿದ ಆಭರಣಗಳನ್ನು ಜಯಲಲಿತಾ ತಮ್ಮ ತಾಯಿಯಿಂದ ವಂಶಪಾರಂಪರ್ಯವಾಗಿ ಪಡೆದುಕೊಂಡಿದ್ದಾರೆ ಎಂದು ನ್ಯಾಯಾಲಯ ತಿಳಿಸಿತ್ತು. ಜಯಲಲಿತಾ ಅವರಿಂದ ವಶಪಡಿಸಿಕೊಳ್ಳಲಾಗಿದ್ದ ಆಸ್ತಿಗಳನ್ನು ಹಸ್ತಾಂತರಿಸುವಂತೆ ನಗರದ 32ನೇ ಹೆಚ್ಚುವರಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯದ ನ್ಯಾಯಮೂರ್ತಿ ಹೆಚ್.ಎ. ಮೋಹನ್ ಅವರು ಕಳೆದ ತಿಂಗಳು ನಿರ್ದೇಶನ ನೀಡಿದ್ದರು.

ತಮಿಳುನಾಡು ಸರ್ಕಾರ ನಂತರದಲ್ಲಿ ಬಂಗಾರ ಹಾಗೂ ವಜ್ರದ ಆಭರಣಗಳನ್ನು ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳಲಿದೆ.

ಅಕ್ರಮ ಆಸ್ತಿ ಪ್ರಕರಣವನ್ನು ಕರ್ನಾಟಕಕ್ಕೆ ವರ್ಗಾಯಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ನಂತರ ಈ ಆಸ್ತಿಗಳನ್ನು ಕರ್ನಾಟಕದ ಖಜಾನೆಗೆ ವರ್ಗಾಯಿಸಲಾಗಿತ್ತು. ಅವುಗಳೀಗ ನ್ಯಾಯಾಲಯದ ವಶದಲ್ಲಿವೆ.

ರಾಜ್ಯ ಸರ್ಕಾರ ವಶಪಡಿಸಿಕೊಂಡಿರುವ ಆಸ್ತಿಯಲ್ಲಿ ಜಯಲಲಿತಾ ವಾರಸುದಾರರಿಗೆ ಹಕ್ಕಿಲ್ಲ ಎಂದು ನ್ಯಾಯಾಲಯ ಈ ಹಿಂದೆ ತಿಳಿಸಿತ್ತು. ಜಯಲಲಿತಾ ಸಂಬಂಧಿಗಳಾದ ಜೆ. ದೀಪ ಹಾಗೂ ಜೆ. ದೀಪಕ್ ದಾಖಲಿಸಿದ್ದ ಅರ್ಜಿಗಳನ್ನು ವಿಶೇಷ ಸಿ.ಬಿ.ಐ. ನ್ಯಾಯಾಲಯ ತಳ್ಳಿ ಹಾಕಿತ್ತು.

## ನ್ಯಾಯಾಧೀಶರ ವಿರುದ್ಧ ಲೈಂಗಿಕ ಪೀಡನೆ ದೂರು

ಅಗರ್ತಲ, ಫೆ. 20 - ನ್ಯಾಯಾಧೀಶರೊಬ್ಬರು ತಮ್ಮ ಮೇಲೆ ಲೈಂಗಿಕ ಪೀಡನೆ ಎಸಗಿರುವುದಾಗಿ ತ್ರಿಪುರಾದ 27 ವರ್ಷದ ಅತ್ಯಾಚಾರ ಸಂತ್ರಸ್ತೆ ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳೆಯ ಪತಿ ಈ ಹಿಂದೆ ಕಮಲ್ಪುರ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. ಈ ಬಗ್ಗೆ ತನಿಖೆ ನಡೆಸಲು ಮೂವರು ಸದಸ್ಯರ ಸಮಿತಿ ರಚಿಸಲಾಗಿದೆ. ಆರೋಪದ ಹಿನ್ನೆಲೆಯಲ್ಲಿ ನ್ಯಾಯಾಧೀಶರನ್ನು ಅಗರ್ತಲ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ. ಮುಂದಿನ ಆದೇಶದವರೆಗೆ ಹುದ್ದೆಗಾಗಿ ಕಾಯುವಂತೆ ತಿಳಿಸಲಾಗಿದೆ.

ಕಮಲ್ಪುರ ಪೊಲೀಸ್ ಠಾಣೆಯಲ್ಲಿ ಲೈಂಗಿಕ ಪೀಡನೆಯ ದೂರು ದಾಖಲಿಸಲಾಗಿದೆ. ಆದರೆ, ನಾವಿನ್ನೂ ಎಫ್.ಐ.ಆರ್. ದಾಖಲಿಸಿಲ್ಲ. ಈ ವಿಷಯ ಸಂವೇದನೆಯಿಂದ ಕೂಡಿದೆ. ಪೊಲೀಸರು ಈ ವಿಷಯವನ್ನು ಹೈಕೋರ್ಟ್ ಪರಿಶೀಲನೆಗೆ ವಹಿಸಿದ್ದಾರೆ ಎಂದು ಧಲಾಯಿಯ ಪೊಲೀಸ್ ವರಿಷ್ಠಾಧಿಕಾರಿ ಅವಿನಾಶ್ ರಾಯ್ ತಿಳಿಸಿದ್ದಾರೆ.

ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಹೇಳಿಕೆ ದಾಖಲಿಸಲು ನ್ಯಾಯಾಧೀಶರ ಛೇಂಬರ್‌ಗೆ ತೆರಳಿದ್ದೆ. ಆಗ ಲೈಂಗಿಕವಾಗಿ ಪೀಡಿಸಲಾಗಿತ್ತು ಎಂದು ಮಹಿಳೆ ಆರೋಪಿಸಿದ್ದರು.

## ಸೋನಿಯಾ, ನಡ್ಡಾ ಅವಿರೋಧ ಆಯ್ಕೆ

**(1ನೇ ಪುಟದಿಂದ)** ಚುನಾವಣೆ ನಡೆಯಲಿದೆ.

ಅವಿರೋಧ ಆಯ್ಕೆಗಳಲ್ಲಿ ಬಿಜೆಪಿ 20 ಸೀಟುಗಳನ್ನು ಪಡೆದಿದೆ. ಕಾಂಗ್ರೆಸ್ 6, ತೃಣಮೂಲ ಕಾಂಗ್ರೆಸ್ 4, ವೈ.ಎಸ್. ಆರ್. ಕಾಂಗ್ರೆಸ್ 3, ಆರ್.ಜೆ.ಡಿ. 2, ಬಿ.ಜೆ.ಡಿ 2 ಹಾಗೂ ಎನ್.ಸಿ.ಪಿ. ಶಿವಸೇನೆ, ಬಿ.ಆರ್.ಎಸ್. ಹಾಗೂ ಜೆ.ಡಿ.ಯು.ಗಳು ತಲಾ ಒಂದು ಸ್ಥಾನ ಪಡೆದಿವೆ.

ಫೆಬ್ರವರಿ 27ರಂದು 56 ಸ್ಥಾನಗಳಿಗೆ ಚುನಾವಣೆ ಘೋಷಿಸಲಾಗಿತ್ತು. ಈಗ ಉತ್ತರ ಪ್ರದೇಶದ 10, ಕರ್ನಾಟಕದ 4 ಹಾಗೂ ಹಿಮಾಚಲ ಪ್ರದೇಶದ ಒಂದು ಸ್ಥಾನಗಳಿಗೆ ಚುನಾವಣೆ ನಡೆಯಬೇಕಿದೆ.

ನಡ್ಡಾ ಗುಜರಾತ್‌ನಿಂದ ಹಾಗೂ ಸೋನಿಯಾ ಗಾಂಧಿ ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

## ಎಸ್ಸೆಸ್ಸೆಲ್ಸಿ-ಪಿಯುಸಿ ವೇಳಾಪಟ್ಟಿ ಪ್ರಕಟ

**(1ನೇ ಪುಟದಿಂದ)** 25ರಿಂದ ಏಪ್ರಿಲ್ 6 ರವರೆಗೆ ನಡೆಯಲಿದೆ. ಈ ವರ್ಷ ರಾಜ್ಯದಲ್ಲಿ 8,96,271 ಮಕ್ಕಳು ಎಸ್‌ಎಸ್‌ಎಲ್‌ಸಿ, 6,98,624 ಮಕ್ಕಳು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಾರೆ. ಒಟ್ಟಾರೆ 2,741 ಪರೀಕ್ಷಾ ಕೇಂದ್ರಗಳಿರುತ್ತವೆ.

ಎಸ್‌ಎಸ್‌ಎಲ್‌ಸಿಯಲ್ಲಿ 20 ಅಂಕಗಳಿಗೆ ಆಂತರಿಕ ಪರೀಕ್ಷೆ ನಡೆಯಲಿದೆ, ಇನ್ನು ದ್ವಿತೀಯ ಪಿಯುಸಿ ಪರೀಕ್ಷೆ ಕಳೆದ ವರ್ಷದಂತೆ 80-20 ಅಂಕಗಳ ಮಾದರಿಯಲ್ಲಿರುತ್ತದೆ.

ವಿದ್ಯಾರ್ಥಿಗಳು ಲಿಖಿತ ರೂಪದಲ್ಲಿ 80 ಅಂಕಗಳಿಗೆ ಪರೀಕ್ಷೆ ಬರೆಯುತ್ತಾರೆ, ಇನ್ನುಳಿದ 20 ಅಂಕಗಳು ಆಂತರಿಕ ಮೌಲ್ಯಮಾಪನದ ಮೂಲಕ ನೀಡಲಾಗುತ್ತದೆ ಎಂದರು. ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರಮುಖ ಘಟ್ಟವಾಗಿರುವ ಎರಡೂ ಪರೀಕ್ಷೆಗಳ ಫಲಿತಾಂಶ ಏಪ್ರಿಲ್ ಕೊನೆ ವಾರದಲ್ಲಿ ಪ್ರಕಟಗೊಳ್ಳಲಿದೆ ಎಂದರು.

**ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳಾಪಟ್ಟಿ :** 25-03-2024 ರ ಸೋಮವಾರ ಪ್ರಥಮ ಭಾಷೆ ಪರೀಕ್ಷೆ-ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, +ಇಂಗ್ಲಿಷ್ (ಎನ್‌ಸಿಇಆರ್‌ಟಿ).

27-03-2024 ರಂದು ಸಮಾಜ ವಿಜ್ಞಾನ ಪರೀಕ್ಷೆ, 30-03-2024 ರಂದು, ವಿಜ್ಞಾನ, ರಾಜ್ಯಶಾಸ್ತ್ರ ಪರೀಕ್ಷೆ, 02-04-2024 ರಂದು ಗಣಿತ, ಸಮಾಜ ಶಾಸ್ತ್ರ ಪರೀಕ್ಷೆ, 03-04-2024 ಅರ್ಥಶಾಸ್ತ್ರ ಪರೀಕ್ಷೆ.

ಬೆಳಗ್ಗೆ 10.15 ರಿಂದ ಮಧ್ಯಾಹ್ನ 1.30 ರ ವರೆಗೆ ಪರೀಕ್ಷೆ ನಡೆಯಲಿದೆ.

**ದ್ವಿತೀಯ ಪಿಯುಸಿ ಪರೀಕ್ಷೆ ವೇಳಾಪಟ್ಟಿ :** 01-03-2024 ರ ಶುಕ್ರವಾರ ಕನ್ನಡ ಹಾಗೂ ಅರೇಬಿಕ್ ಪರೀಕ್ಷೆ. 04-03-2024 ಸೋಮವಾರ ಗಣಿತ ಪರೀಕ್ಷೆ. 05-03-2024 ರಂದು ರಾಜ್ಯ ಶಾಸ್ತ್ರ, ಸಂಖ್ಯಾಶಾಸ್ತ್ರ ಪರೀಕ್ಷೆ. 06-03-2024 ರಂದು ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋ ಮೊಬೈಲ್ ಪರೀಕ್ಷೆ.

07-03-2024 ರಂದು ಇತಿಹಾಸ ಹಾಗೂ ಭೌತಶಾಸ್ತ್ರ ಪರೀಕ್ಷೆ. 09-03-2024 ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ಶಾಸ್ತ್ರ, ಗೃಹ ವಿಜ್ಞಾನ ಪರೀಕ್ಷೆ. 11-03-2024 ರಂದು ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ ಪರೀಕ್ಷೆ. 13-03-2024 ರಂದು ಇಂಗ್ಲಿಷ್ ಪರೀಕ್ಷೆ.

15-03-2024 ರಂದು ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನ ಶಾಸ್ತ್ರ, ಮೂಲಗಣಿತ ಪರೀಕ್ಷೆ. 16-03-2024 ರಂದು ಅರ್ಥಶಾಸ್ತ್ರ ಪರೀಕ್ಷೆ, 18-03-2024 ರಂದು ಭೂಗೋಳ ಶಾಸ್ತ್ರ, ಜೀವಶಾಸ್ತ್ರ ಪರೀಕ್ಷೆ.

20-03-2024 ರಂದು ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ ಪರೀಕ್ಷೆ, 22-03-2024 ರಂದು ಹಿಂದಿ ಪರೀಕ್ಷೆ.

ಪರೀಕ್ಷೆ ಬೆಳಗ್ಗೆ 10.15ಕ್ಕೆ ಆರಂಭವಾಗಿ 1.30ಕ್ಕೆ ಮುಕ್ತಾಯವಾಗಲಿದೆ.

## ಮರಾಠಕ್ಕೆ ಮೀಸಲು

**(1ನೇ ಪುಟದಿಂದ)** ಅವರು ಮಸೂದೆ ಮಂಡಿಸಿದರು. ಮೀಸಲಾತಿ ಮಸೂದೆಗಾಗಿ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲಾಗಿತ್ತು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್
ತುಂಗಭದ್ರಾ ಬಡಾವಣೆ (ಕಮರ್ಷಿಯಲ್ ಸೈಟ್)
40X40 (55 ಲಕ್ಷಕ್ಕೆ) ಪಶ್ಚಿಮ- ದಕ್ಷಿಣ
ಕಾರ್ನರ್ ಡಬಲ್ ರೋಡ್‌ನ 60 ಅಡಿ ರಸ್ತೆಗೆ
ಕಿರಣ್ ಭೂಸ್ನೂರ್ : 98440 63409
(ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ)

**ಸೈಟು ಮಾರಾಟಕ್ಕಿದೆ**
ಕುಂದುವಾಡದ ತುಂಗಭದ್ರಾ ಬಡಾವಣೆಯಲ್ಲಿ ಉತ್ತರ ಮುಖವುಳ್ಳ 20×30 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ :
97416 84666, 82177 98233

**ಸೈಟ್ ಮಾರಾಟಕ್ಕೆ (KHB)**
ಹೌಸಿಂಗ್ ಬೋರ್ಡ್
12x18 ಮೀಟರ್ (40x60)
ಪಶ್ಚಿಮ 67 ಲಕ್ಷ
ಕಿರಣ್ ಭೂಸ್ನೂರ್
97315 63409, 98440 63409
ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ

**ಹುಡುಗರು ಬೇಕಾಗಿದ್ದಾರೆ**
ಕನ್ನಡ ಭಾಷಾ ಜ್ಞಾನ ಮತ್ತು ಟೈಪಿಂಗ್ ಅನುಭವವಿರುವವರು ಬೇಕಾಗಿದ್ದಾರೆ ಸಂಪರ್ಕಿಸಿ :
ಬೆಳಿಗ್ಗೆ 11 ರಿಂದ ಸಂಜೆ 5.30ರವರೆಗೆ
08192 254736

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯಕ್ಕೆ ಸೂಪರ್ ವೈಸರ್ ಮತ್ತು ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ :
63639-54459

**ಕಾರ್ ಬಾಡಿಗೆಗೆ**
ಸಂಪರ್ಕಿಸಿ
86609 98651
97436 54365

**ತಕ್ಷಣ ಬೇಕಾಗಿದ್ದಾರೆ**
ಹೋಲ್‌ಸೇಲ್ ದಿನಸಿ ಅಂಗಡಿಯಲ್ಲಿ ಗುಮಾಸ್ತರ ಹುದ್ದೆಗೆ ಕನ್ನಡ ಮತ್ತು ಹಿಂದಿ ಮಾತನಾಡಲು ಬರುವಂತಹ ಯುವಕರು ಬೇಕಾಗಿದ್ದಾರೆ.
94482 02879, 79969 60606

**ಬೋರ್‌ವೆಲ್ ಪಾಯಿಂಟ್**
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ
86609 98651, 97436 54365

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಬೇಕಾದ ವಿಳಾಸ
ಸಾಕೇತ್ ಎಂಟರ್‌ಪ್ರೈಸಸ್
ಫ್ಲಾಟ್ ನಂ. 5-E ಕರೂರ್ ಇಂಡಸ್ಟ್ರಿಯಲ್ ಏರಿಯಾ, ಡಿ.ಐ.ಸಿ. ಆಫೀಸ್ ಎದುರು, ದಾವಣಗೆರೆ. - 577006.
81972 09751

**ಸೋಫ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, , ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple
Maharaj Pet, Davanagere
98445 81966

**ಭಟ್ಟರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಹಾಗೂ ಇಡ್ಲಿ, ವಡಾ, ಬಜ್ಜಿ ಭಟ್ಟರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 7 ರಿಂದ ಸಂಜೆ 5:30ವರೆಗೆ ಸಂಪರ್ಕಿಸಿ.
+91 70194 69302

**ಲೇಬರ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಮನ್ವಿತ ಎಂಟರ್‌ಪ್ರೈಸಸ್
63620 23451, 97434 37003

**ಸುಸಜ್ಜಿತವಾದ ಡುಪ್ಲೆಕ್ಸ್ ಮನೆ ಖರೀದಿಗೆ ಬೇಕಾಗಿದೆ**
ನಿಜಲಿಂಗಪ್ಪ, ಎಸ್.ಎಸ್. ಎ & ಬಿ ಬ್ಲಾಕ್, ಎಂಸಿಸಿ ಎ & ಬಿ ಸಿದ್ದವೀರಪ್ಪ, ಆಂಜನೇಯ ಬಡಾವಣೆಗಳಲ್ಲಿ 40x60 ಅಳತೆಯ ಹೊಸ ಮನೆ (6-8 ವರ್ಷ) ಖರೀದಿಗೆ ಬೇಕಾಗಿದೆ.
ಮಾಲೀಕರು ಸಂಪರ್ಕಿಸಿ
80738 99112

**ಡ್ರೈವರ್ ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್ ಕರೂರು ಇಂಡಸ್ಟ್ರೀಯಲ್ ಏರಿಯಾ ದಾವಣಗೆರೆ. ಅಶೋಕ ಲೇಲ್ಯಾಂಡ್ ಗಾಡಿ 2000 ಕೆಪಾಸಿಟಿಗೆ ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಈ ಕೆಳಗಿನ ಮೊಬೈಲ್ ನಂಬರ್‌ಗೆ ಸಂಪರ್ಕಿಸಿ.
87488 79470, 99018 69371

**ಬೇಕಾಗಿದ್ದಾರೆ**
ಲೋಕಿಕೆರೆ ಇಂಡಸ್ಟ್ರೀಯಲ್ ಏರಿಯಾದಲ್ಲಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
70190 73080

**HOUSE FOR RENT**
Ground floor Door no 868/51
Shankar Vihar Badavane,
3rd Block, 2nd cross,
Near siddi Vinayaka Temple,
Davangere -4
97397 97638

**ಸ್ಟಾರ್ ಮ್ಯಾರೇಜಸ್**
ಎಲ್ಲಾ ಜನಾಂಗದ ವಧು-ವರರು, ವಿಚ್ಛೇದಿತರು ಹಾಗೂ ವಿಧುರ-ವಿಧವೆಯರು ಸಂಪರ್ಕಿಸಿ.
81057 47339, 81976 07559

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅನುಭವವುಳ್ಳ ದೋಸೆ ಭಟ್ಟರು, ಟೀ-ಕಾಫಿ ಮಾಡುವವರು, ಸಪ್ಲೈಯರ್‌ಗಳು, ಕೌಂಟರ್ ಹುಡುಗರು, ಕ್ಲೀನರ್‌ಗಳು, ಚಾಟ್ಸ್ ಮಾಡುವವರು, ಹೆಲ್ಪರ್ ಗಳು ಬೇಕಾಗಿದ್ದಾರೆ. ಉಚಿತ ಊಟ ಮತ್ತು ವಸತಿ ಸೌಲಭ್ಯವಿದೆ.
95350 35660, 63646 64518

**WANTED**
Audit Assistants 5 Posts - Female
Qualification : B.Com Pass or Fail with Computer Knoweldge
Walk-In Interview on
21.02.2024, 22.02.2024 at 10 AM to 6 PM
Fayaz Ahammed, Auditor & Tax Consultant,
Room No. B11 & 12, Muslim Hostel shopping Complex, Ambedkar Cricle, Davanagere.
94480 45778

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್ ಸೇಲ್ಸ್ (ಸಗಟು) ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವ ಇರುವ ಸೇಲ್ಸ್ ಬಾಯ್ (ಹುಡುಗರು) ಮತ್ತು ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾಭ್ಯಾಸ 10+2 (SSLC, PUC) ಮೇಲ್ಪಟ್ಟವರು ವಿಚಾರಿಸಿ.
ವೃಷಭ್ ಮೆಡಿಕಲ್ಸ್
ಜಾಲಿನಗರ ಶಿವಾಲಿ ರಸ್ತೆ, ದಾವಣಗೆರೆ-6.
99805 32781

**ಉದ್ಯೋಗಾವಕಾಶ**
ಮಹಿಳೆಯರಿಗೆ ತರಬೇತಿ ನೀಡಿ ಉದ್ಯೋಗವನ್ನು ನೀಡಲಾಗುವುದು. ಸಂಪರ್ಕಿಸಿ
86609 98651, 97436 54365

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)**
ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಕೆಲಸಕ್ಕೆ ಬೇಕಾಗಿದ್ದಾರೆ**
ಎಕ್ಸಿಕ್ಯೂಟಿವ್ DSA Office ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
Office Work & Tele Calling Interested
97385 60365

**ಬೇಕಾಗಿದ್ದಾರೆ**
ಪದವಿ ಆಗಿರುವ ಕಂಪ್ಯೂಟರ್ ಆಪರೇಟರ್ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಹಾಗೂ ಟ್ಯಾಲಿ ಗೊತ್ತಿರುವಂತಹ ಅಭ್ಯರ್ಥಿಗಳು ಈ ಕೂಡಲೇ ಸಂಪರ್ಕಿಸಿ.
ಎಂಇ ಎಸ್ ಸಮೂಹ ಶಿಕ್ಷಣ ಸಂಸ್ಥೆ
ಆಂಜನೇಯ ಬಡಾವಣೆ, ದಾವಣಗೆರೆ.
98804 36414, 98800 30171

**ಕೆಲಸಕ್ಕೆ ಬೇಕಾಗಿದ್ದಾರೆ**
ಟಿವಿ ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ದಾವಣಗೆರೆ
84535 30199

**ಮನೆ ಮಾರಾಟಕ್ಕೆ ಇದೆ**
ದಾವಣಗೆರೆ ಚಿಕ್ಕಮ್ಮಣಿ ಲೇಔಟ್ ಸರಸ್ವತಿ ಡಾಬಾ ಸ್ಟಾಪ್ ಹತ್ತಿರ ಉತ್ತರಾಭಿಮುಖವಾಗಿರುವ 30x40 ಅಳತೆಯ 2 ಮಹಡಿ, ನೆಲ ಮಹಡಿ 30x40 2BHK, ಮೊದಲನೇ ಮಹಡಿ 20x30 2BHK 2 ಪೂರ್ವ ದಿಕ್ಕಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
98447 31736

**ಮಾರಾಟಕ್ಕಿವೆ**
ಆಸ್ಪತ್ರೆಯ O.T ಉಪಕರಣಗಳು (Instruments) ಮತ್ತು ವುಡನ್ ಮಂಚಗಳು ಮತ್ತು ಟೇಬಲ್‌ಗಳು ಮಾರಾಟಕ್ಕಿವೆ. ವಿಚಾರಿಸಿ.
97403 71903, 97403 71902

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**SHOP FOR RENT**
Boys Hostel Road,
Ist Floor Shop For Rent
7th Cross, 9th Main
82177 72482

**ತಕ್ಷಣ ಬೇಕಾಗಿದ್ದಾರೆ**
ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ.
ಆಕರ್ಷಕ ಸಂಬಳ : 8,000 ಇರುತ್ತದೆ. ಸಂಪರ್ಕಿಸಿ.
89515 01053

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
SSLC ನೇರ ಪರೀಕ್ಷೆ
IInd PUC/Senior Secondary, Arts/Commerce/Science
B.Sc.-Agriculture, B.Tech All branches,
D.Pharma, B.Ed., PhD regular
B.A., B.com., B.Sc., M.A., M.Com.,
MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

# ಸರ್ವಜ್ಞನ ತ್ರಿಪದಿಗಳಲ್ಲಿ ಸರ್ವಕಾಲಿಕ ಸತ್ಯ, ಜೀವನದ ಪಾಠವಿದೆ : ಡಿಸಿ



ದಾವಣಗೆರೆ, ಫೆ.20- ಹದಿನಾರನೇ ಶತಮಾನದಲ್ಲಿ ಹಿರೇಕೆರೂರು ತಾಲ್ಲೂಕು ಅಬ್ಬಲೂರು ಗ್ರಾಮದಲ್ಲಿ ಹುಟ್ಟಿ ಬೆಳೆದಂತಹ ಸರ್ವಜ್ಞ ತನ್ನ ತ್ರಿಪದಿಗಳ ಮೂಲಕ ಸರ್ವಕಾಲಿಕ ಸತ್ಯ ಮತ್ತು ಜೀವನದ ಪಾಠವನ್ನು ಪ್ರತಿಯೊಬ್ಬರಿಗೂ ತಿಳಿಸಿ ಕೊಟ್ಟಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಜಿಲ್ಲಾ ಕಂಬಾರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದಲ್ಲಿ ಇಂದು ನಡೆದ ಸರ್ವಜ್ಞ ಜಯಂತಿಯಲ್ಲಿ ಸಂತ ಸರ್ವಜ್ಞನ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಸರ್ವಜ್ಞನು ರಚಿಸಿದ ತ್ರಿಪದಿಗಳಲ್ಲಿ ಅತ್ಯಂತ ಸರಳ ಕನ್ನಡ ಭಾಷೆ ಇದೆ. ವೈಚಾರಿಕತೆ ಮತ್ತು ಸತ್ಯಕ್ಕೆ ಬಹಳ ಹತ್ತಿರವಾದಂತಹ ಹಲವು ಒಗಟುಗಳು ಇದರಲ್ಲಿ ಸೇರಿವೆ. ಒಟ್ಟು ಒಂದು ಸಾವಿರಕ್ಕೂ ಹೆಚ್ಚು ತ್ರಿಪದಿಗಳು ಸರ್ವಜ್ಞನ ಹೆಸರಿನಲ್ಲಿ ದಾಖಲಾಗಿವೆ. ಈಗಾಗಲೇ ಸರ್ಕಾರ ಇವುಗಳ ಸಂಗ್ರಹಣೆ ಮಾಡಿ ಹೊರತಂದಿದೆ ಎಂದರು.

ಇತಿಹಾಸ ತಜ್ಞರ ಪ್ರಕಾರ ಇವುಗಳಲ್ಲಿ ಕೆಲವು ತ್ರಿಪದಿಗಳು ನಂತರದ ಕಾಲದಲ್ಲಿ ಬೇರೆ ಬೇರೆ ಲೇಖಕರಿಂದ ಬರೆಯಲ್ಪಟ್ಟಿರಬಹುದು. ಸರ್ವಜ್ಞನ ತ್ರಿಪದಿಗಳು ಅವರ ಸರಳತೆ ಮತ್ತು ಪ್ರಾಸಬದ್ಧತೆಯಿಂದ ಜನಪ್ರಿಯವಾಗಿವೆ. ಈ ತ್ರಿಪದಿಗಳು ಮುಖ್ಯವಾಗಿ ನೈತಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಷಯ ಕುರಿತ ತ್ರಿಪದಿಗಳಾಗಿವೆ ಎಂದರು.

ಸರ್ವಜ್ಞ ಅಧ್ಯಾತ್ಮಿಕ ಚಿಂತಕರು, ಸಮಾಜ ಪರಿವರ್ತಕರು, ಇವರು ಮಾಡಿದಂತಹ ತತ್ವ, ಬೋಧನೆಗಳು ಉತ್ತಮ ಸಮಾಜ ನಿರ್ಮಾಣ ಮಾಡಬೇಕೆಂಬ ಉದ್ದೇಶ ಹೊಂದಿವೆ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಕೆ.ಸಿ.ಲೋಕೇಶ್ ಉಪನ್ಯಾಸ ನೀಡಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ.ಇಟ್ನಾಳ್, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ.ಸಂತೋಷ್, ಅಪರ ಜಿಲ್ಲಾಧಿಕಾರಿ ಸೈಯ್ಯದ್ ಆಫ್ರಿನ್ ಭಾನು ಎಸ್.ಬಳ್ಳಾರಿ, ಸಂತ ಸರ್ವಜ್ಞ ಸಂಘದ ಅಧ್ಯಕ್ಷ ಪುಷ್ಪರಾಜು, ಪ್ರಧಾನ ಕಾರ್ಯದರ್ಶಿ ಇ.ತಿಪ್ಪೇಸ್ವಾಮಿ, ಉಪಾಧ್ಯಕ್ಷ ಮೂಗಬಸಪ್ಪ, ಯುವ ಸೈನ್ಯದ ಅಧ್ಯಕ್ಷ ಎನ್. ಶಿವಕುಮಾರ್, ಹರಿಹರ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್ ಕಂಬಾರ, ಉಪಾಧ್ಯಕ್ಷ ಈರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ನಿವೃತ್ತ ಮುಖ್ಯ ಶಿಕ್ಷಕ ಬಸವರಾಜಪ್ಪ ಬಾತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ನಾಳೆ ಬೆಳ್ಳೂಡಿ ಗ್ರಾಮದೇವತೆ ದೇವಸ್ಥಾನ ಉದ್ಘಾಟನೆ

ದಾವಣಗೆರೆ, ಫೆ.20- ಹರಿಹರ ತಾಲೂಕು ಬೆಳ್ಳೂಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾಮದೇವತೆ ಉಡಸಲಾಂಬಿಕಾ ದೇವಿ ದೇವಸ್ಥಾನದ ಉದ್ಘಾಟನೆ, ಶ್ರೀದೇವಿಯ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭವು ನಾಡಿದ್ದು ದಿನಾಂಕ 22 ಹಾಗೂ 23ರಂದು ನಡೆಯಲಿದೆ ಎಂದು ದೇವಸ್ಥಾನದ ಅಧ್ಯಕ್ಷ ಮರುಳಸಿದ್ದಯ್ಯ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 22ರಂದು ಬೆಳಿಗ್ಗೆ 5.30ರಿಂದಲೇ ಧಾರ್ಮಿಕ ವಿಧಿ ವಿಧಾನಗಳು ಆರಂಭವಾಗಲಿವೆ. ರಾತ್ರಿ 11 ಗಂಟೆಗೆ ಗಣಪತಿ ಪೂಜೆ, ನವಗ್ರಹ ಹೋಮ, ಮಂಡಲ ರಚನೆ, ಭಜನಾ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಫೆ. 23ರಂದು ಶ್ರೀ ನಾಗದೇವರ ಮೂರ್ತಿ ಹಾಗೂ ಉಡಸಲಾಂಬಿಕಾ ದೇವಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ, ಮಧ್ಯಾಹ್ನ 12ಗಂಟೆಗೆ ನಡೆಯಲಿದೆ. ವಿವಿಧ ಮಠಾಧೀಶರು, ಧರ್ಮದರ್ಶಿಗಳು ಸಾನ್ನಿಧ್ಯ ವಹಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಎಚ್.ಎಸ್. ಶಿವಶಂಕರ್, ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಸೇರಿದಂತೆ, ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ದೇವಸ್ಥಾನ ಸಮಿತಿ ಹಾಗೂ ಗ್ರಾಮದ ಪ್ರಮುಖರಾದ ಹನುಮಂತಗೌಡ್ರು, ಜಿ.ಎಸ್. ಸಂದೀಪ್ ಗೌಡ್ರು, ಬಿ.ವೈ. ಭೀಮಪ್ಪ, ಬಾತಿ ಮಹೇಶ್ವರಪ್ಪ, ಶಂಕರಪ್ಪ ಪೂಜಾರ ಪತ್ರಿಕಾಗೋಷ್ಠಿಯಲ್ಲಿದ್ದರು.

# ಹಳೇಬಾತಿಯಲ್ಲಿ ಎಸ್‌ಡಿಎಂಸಿ ಸಮಿತಿ ರಚನೆ



ದಾವಣಗೆರೆ, ಫೆ. 20- ಹಳೇಬಾತಿಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲಿ ನೂತನ ಎಸ್‌ಡಿಎಂಸಿ ಸಮಿತಿ ರಚಿಸಲಾಯಿತು. ಅಧ್ಯಕ್ಷರಾಗಿ ಜಗದೀಶ್, ಉಪಾಧ್ಯಕ್ಷರಾಗಿ ಶ್ರೀಮತಿ ರೂಪಾ ಆಯ್ಕೆಯಾದರು. ಪಂಚಾಯ್ತಿ ಮಾಜಿ ಅಧ್ಯಕ್ಷ ಎಸ್.ಆರ್. ಸಿದ್ದೇಶ್ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ 25ರಂದು ಹಿಮೋಫಿಲಿಯಾ 'ರೇಸ್ ಫಾರ್ 7 ಮ್ಯಾರಥಾನ್'

ದಾವಣಗೆರೆ,ಫೆ.20- ನಗರದ ಹಿಮೋಫಿಲಿಯಾ ಸಂಸ್ಥೆಯ ವತಿಯಿಂದ ಇದೇ ದಿನಾಂಕ 25 ರಂದು ಬೆಳಿಗ್ಗೆ 6-30 ಗಂಟೆಗೆ 'ಅಂತರಾಷ್ಟ್ರೀಯ ವಿರಳ ರೋಗಗಳ ದಿನಾಚರಣೆ' ಅಂಗವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ 'ರೇಸ್ ಫಾರ್ 7 ಮ್ಯಾರಥಾನ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರತಿ ವರ್ಷ ಫೆಬ್ರವರಿ ತಿಂಗಳ ಕೊನೆಯ ದಿನವನ್ನು 'ಅಂತರರಾಷ್ಟ್ರೀಯ ವಿರಳ ರೋಗಗಳ ದಿನಾಚರಣೆ'ಯಾಗಿ ಆಚರಿಸಲಾಗುತ್ತದೆ. ಪ್ರಪಂಚದಾದ್ಯಂತ ವಿರಳ ರೋಗಿಗಳು ಮತ್ತು ಅವರ ಕುಟುಂಬಗಳು ಅತ್ಯಂತ ಕ್ಲಿಷ್ಟಕರ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ವಿರಳ ಎನ್ನುವ ಒಂದೇ ಕಾರಣಕ್ಕೆ ಸಮಾಜ, ಸರ್ಕಾರ ಮತ್ತು ಸಂಘ-ಸಂಸ್ಥೆಗಳ ಗಮನ ಸೆಳೆಯುವಲ್ಲಿ ವಿಫಲವಾಗಿರುವುದು ಸರ್ವೇಸಾಮಾನ್ಯ.

ವಿರಳ ರೋಗಿಗಳ ಕ್ಷೇಮಾಭಿವೃದ್ದಿ ಸಂಸ್ಥೆ-ಭಾರತ (ಓಆರ್‌ಡಿಐ) 2013 ರಲ್ಲಿ ಪ್ರಾರಂಭಗೊಂಡಿತು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ವೈದ್ಯಕೀಯ ಸೌಲಭ್ಯಗಳ ಅಭಿವೃದ್ಧಿ, ವೈಜ್ಞಾನಿಕ ಲೋಕದಲ್ಲಿ ಸಂಶೋಧನೆ ಮತ್ತು ಆವಿಷ್ಕಾರಗಳ ಪ್ರೋತ್ಸಾಹಗಳಿಗೋಸ್ಕರ ಫೆಬ್ರವರಿ ತಿಂಗಳ ಕೊನೆ ದಿನದಂದು ಅನೇಕ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

ಮೂರು ದಶಕಗಳಿಂದ ಹಿಮೋಫಿಲಿಯಾ ಮತ್ತು ಇತರೆ ವಿರಳ ರಕ್ತಸ್ರಾವ ರೋಗಿಗಳ ಕ್ಷೇಮಾಭಿವೃದ್ದಿಗಾಗಿ ಕಾರ್ಯ ನಿರ್ವಹಿಸುತ್ತಿದ್ದು, ಓಆರ್‌ಡಿಐ ನೊಂದಿಗೆ ಸಹಯೋಗ ಹೊಂದಿದೆ.

ಈ ಅಭಿಯಾನ ಯಶಸ್ವಿಗೊಳಿಸಲು ಭಾಗವಹಿಸುವವರು https://registration.ordindia.in/reg?city=davanagere. ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

# ಕುವೆಂಪು ಘೋಷವಾಕ್ಯ ಬದಲಿಸುವ ರಾಜ್ಯ ಸರ್ಕಾರದ ನಡೆ ವಿರುದ್ಧ ಎಬಿವಿಪಿ ಪ್ರತಿಭಟನೆ



ದಾವಣಗೆರೆ, ಫೆ. 20- 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬನ್ನಿ' ಎಂಬ ಕುವೆಂಪು ಅವರ ಅರ್ಥಪೂರ್ಣ ವಾಕ್ಯವನ್ನು'ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ' ಎಂದು ಬದಲಾಯಿಸಲು ಹೊರಟಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ, ಎಬಿವಿಪಿ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಎನ್. ದುರ್ಗಾಶ್ರೀ ಅವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಸರ್ಕಾರ ರಾಜ್ಯದ ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ಕ್ಷುಲ್ಲಕ ಕಾರಣಗಳನ್ನು ಮುಂದಿಟ್ಟುಕೊಂಡು ಗೊಂದಲ ಸೃಷ್ಟಿಸುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ಕುವೆಂಪು ಅವರ ಸಾಲುಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕು. ಕನ್ನಡದ ಮಹಾನ್ ದಾರ್ಶನಿಕರು, ಕವಿಯ ಆಶಯಗಳನ್ನು ಮೀರಿ ನಿಲ್ಲುವ ದಾಷ್ಟ್ಯತನವನ್ನು ರಾಜ್ಯ ಸರ್ಕಾರ ತೋರಬಾರದು ಎಂದು ಕಿಡಿಕಾರಿದರು.

ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ಶಾಲೆಗಳಲ್ಲಿ ಪರಂಪರೆಯಿಂದ ನಡೆದುಕೊಂಡು ಬಂದಿರುವ ಸರಸ್ವತಿ, ಗಣಪತಿ ಮೊದಲಾದ ಧಾರ್ಮಿಕ ಪೂಜೆಗಳನ್ನು ಮಾಡುವುದನ್ನು ನಿಷೇಧ ಮಾಡಿ ಗೊಂದಲ ಸೃಷ್ಟಿ ಮಾಡಿತ್ತು. ಸಾರ್ವಜನಿಕರ ಪ್ರತಿಭಟನೆಗೆ ಮಣಿದು ಆ ಆದೇಶವನ್ನು ಸರ್ಕಾರ ಹಿಂತೆಗೆದುಕೊಂಡಿತ್ತು. ಇದೀಗ ಸರ್ಕಾರ ಮತ್ತೆ ಕುವೆಂಪು ಅವರ 'ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ' ಎಂಬ ಘೋಷಣೆಯನ್ನು ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸಿ ಎಂದು ಬದಲಾಯಿಸಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ರೀತಿಯ ತರ್ಕ ಶೂನ್ಯ ನಡೆಗಳಿಂದ ಸರ್ಕಾರವು ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ವಿರೋಧಿ ನೀತಿ ಅನುಸರಿಸುತ್ತಿರುವುದು ಭಾಸವಾಗುತ್ತಿದೆ. ಜ್ಞಾನ ದೇಗುಲವಿದು ಧೈರ್ಯವಾಗಿ ಪ್ರಶ್ನಿಸು ಎಂದರೆ ಜ್ಞಾನ ದೇಗುಲವನ್ನೇ ಪ್ರಶ್ನಿಸಬೇಕೇ? ಜ್ಞಾನವನ್ನು ಪ್ರಶ್ನಿಸಬೇಕೇ? ಅಥವಾ ಜ್ಞಾನ ದೇಗುಲದಂಗಳದಲ್ಲಿ ಶ್ರದ್ಧೆಯೊಂದಿಗೆ ವಿನಯ ಪೂರ್ವಕವಾಗಿ ಜ್ಞಾನ ಸಂಪಾದಿಸಿ ಮೌಲ್ಯಯುತವಾಗಿ ಪ್ರಶ್ನಿಸುವ ಮನೋಭಾವವನ್ನು ರೂಢಿಸಿಕೊಳ್ಳುಬೇಕೆ? ಹೀಗೆ ಶಾಲಾ-ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳಲ್ಲಿನ ವ್ಯಕ್ತಿತ್ವ, ವಿನಯತೆ, ವಿನಮ್ರತೆ, ವಿದ್ವತ್ ಪೂರ್ಣತೆಯಿಂದ ಕೂಡಿರಬೇಕೇ ವಿನಹ: ಗೂಂಡಾ ಪ್ರವೃತ್ತಿಯಿಂದಲ್ಲ. ಹಾಗೊಂದು ವೇಳೆ ಧೈರ್ಯವಾಗಿ ಪ್ರಶ್ನಿಸು ಎನ್ನುವ ಸಾಲು ಬೇಕಿದ್ದರೆ ಭ್ರಷ್ಟ ಸಚಿವರ, ಅಧಿಕಾರಿ ವರ್ಗದವರ ಸರ್ಕಾರಿ ಕಚೇರಿಗಳಲ್ಲಿ ಹಾಕಿಸಿಕೊಳ್ಳಲಿ ಎಂದು ಗುಡುಗಿದರು.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ ಎನ್ನುವ ನಾಡಿನ ಸಾಂಸ್ಕೃತಿಕ ನಾಯಕ ಬಸವಣ್ಣನವರ ಆಶಯದಂತೆ ಸರ್ಕಾರ ತನ್ನ ನಡೆಯನ್ನು ತಿದ್ದಿಕೊಳ್ಳಬೇಕೆಂದು ಹಾಗೂ ವಿಶ್ವಮಾನವ ಕುವೆಂಪುರವರ ಸಾಲುಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ವಿಭಾಗದ ಸಂಘಟನಾ ಕಾರ್ಯದರ್ಶಿ ಮಂಜುನಾಥ್ ಕೊಳ್ಳೇರ, ನಗರ ಸಹ ಕಾರ್ಯದರ್ಶಿ ಮೋಹಿತ್, ರಾಜ್ಯ ಕಾರ್ಯಕಾರಿಣಿ ಸದಸ್ಯ ರತನ್, ತಿಪ್ಪೇಸ್ವಾಮಿ, ಕರಿಬಸವ, ಉಮೇಶ್ ಇನ್ನಿತರರು ಉಪಸ್ಥಿತರಿದ್ದರು.

# 28ರಂದು ಆವರಗೊಳ್ಳ ಜಾತ್ರೆ



ದಾವಣಗೆರೆ, ಫೆ.20- ಇದೇ ದಿನಾಂಕ 28 ರಂದು ಸಂಜೆ 6ಗಂಟೆಗೆ ತಾಲ್ಲೂಕಿನ ಆವರಗೊಳ್ಳದ ಶ್ರೀವೀರಭದ್ರೇಶ್ವರ ಸ್ವಾಮಿ ಮಹಾ ರಥೋತ್ಸವ ನಡೆಯಲಿದೆ ಎಂದು ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ಸೇವಾ ಸಂಘದ ಅಧ್ಯಕ್ಷ ಬಿ.ಎಂ. ಷಣ್ಮುಖಯ್ಯ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ದಿನಾಂಕ 23ರಿಂದ ಮಾರ್ಚ್ 2ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಫೆ.23ರಂದು ನಂದಿ ಧ್ವಜಾರೋಹಣದ ನಂತರ ಸ್ವಾಮಿಯ ಮೆರವಣಿಗೆ, ಹರಿದ್ರಾಲೇಪನ, ಕಂಕಣಧಾರಣೆ ನೆರವೇರಲಿದೆ. ಫೆ. 24ರಂದು ಬಸವೇಶ್ವರ ಆರೋಹಣ ಉತ್ಸವ, ಫೆ. 25ರಂದು ಸರ್ಪಾರೋಹಣ ಉತ್ಸವ, ಇದೇ ದಿನಾಂಕ 26ರಂದು ರಥಕ್ಕೆ ಕಳಸಾರೋಹಣ ಹಾಗೂ ಅಶ್ವಾರೋಹಣ ನೆರವೇರಲಿದೆ ಎಂದರು.

ಫೆ. 27ರಂದು ದೊಡ್ಡಬಾತಿ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಬೀರಲಿಂಗೇಶ್ವರ ಸ್ವಾಮಿಯ ಆಗಮನವಾಗಲಿದೆ. ತೇರುಮನೆ ಚೌಡೇಶ್ವರಿ ದೇವಸ್ಥಾನ ವತಿಯಿಂದ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ.

ಫೆ.28ರಂದು ಸಂಜೆ 6 ಗಂಟೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಮಹಾರಥೋತ್ಸವ ನೆರವೇರಲಿದೆ. ಫೆ. 29 ಸ್ವಾಮಿಯ ಗುಗ್ಗುಳ ಸೇವೆ, ಓಕುಳಿ ಸೇವೆ ಹಾಗೂ ಗಂಗಾಪೂಜೆ ನೆರವೇರಲಿದೆ. ನಂತರ ವೀರಗಾಸೆ ಸೇವೆ ನಡೆಯಲಿದ್ದು, ಮಾರ್ಚ್ 1ರಂದು ಗುಗ್ಗಳದೊಂದಿಗೆ ಸ್ವಾಮಿ ದೇವಸ್ಥಾನಕ್ಕೆ ಆಗಮಿಸಲಿದೆ. ಮಾ.2ರಂದು ಕಂಕಣ ವಿಸರ್ಜನೆ ಕಾರ್ಯಕ್ರಮವಿದೆ ನಡೆಯಲಿದೆ..

ದೇವಸ್ಥಾನ ಸೇವಾ ಸಮಿತಿಯ ಪ್ರಮುಖರು ಹಾಗೂ ಗ್ರಾಮಸ್ಥರಾದ ವಿ. ವೀರಯ್ಯ, ಡಿ. ವೀರಯ್ಯ, ರಾಜಶೇಖರಪ್ಪ, ಡಿ. ಶಿವಪುತ್ರಪ್ಪ, ಜಿ.ಟಿ. ವೀರೇಶ್, ಟಿ. ವೀರಭದ್ರಪ್ಪ, ಸಿದ್ದೇಶ್ ಕೋಡಿಹಳ್ಳಿ, ಮಟ್ಟಿಕಲ್ಲು ವೀರಭದ್ರಸ್ವಾಮಿ ಪತ್ರಿಕಾಗೋಷ್ಠಿಯಲ್ಲಿದ್ದರು.

# ವಿನೋಬನಗರದಲ್ಲಿ ಇ ಸ್ವತ್ತು ವಿತರಣೆ



ದಾವಣಗೆರೆ, ಫೆ. 20- ಮಹಾನಗರ ಪಾಲಿಕೆ ವತಿಯಿಂದ ವಾರ್ಡ್ ನಂಬರ್ 16ರ ವಿನೋಬನಗರದಲ್ಲಿ ಏರ್ಪಡಿಸಲಾಗಿದ್ದ ಮನೆ ಬಾಗಿಲಿಗೆ ಇ- ಸ್ವತ್ತು ಕಾರ್ಯಕ್ರಮವನ್ನು ಮಹಾನಗರ ಪಾಲಿಕೆ ಸದಸ್ಯರಾದ ಎ. ನಾಗರಾಜ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತರಾದ ರೇಣುಕಾ, ಉಪಆಯುಕ್ತರಾದ ಲಕ್ಷ್ಮಿ ಹಾಗೂ ವಲಯ ಆಯುಕ್ತರಾದ ನಾಗರಾಜ್, ಕಂದಾಯ ಅಧಿಕಾರಿಯಾದ ಈರಮ್ಮ, ಬಿಲ್‌ಕಲೆಕ್ಟರ್ ನಾಗರಾಜ್, ವಾರ್ಡ್ ಅಧ್ಯಕ್ಷ ಸುರೇಶ್, ಮುಖಂಡರಾದ ರವಿ, ಸತೀಶ್, ರಾಮಚಂದ್ರ ರಾಯ್ಕರ್, ಯೋಗೇಶ್, ಸೋಮಶೇಖರ್, ಚೌಡಪ್ಪ, ಶೇಖರ್, ಗೋಪಾಲ್ ಮುಂತಾದವರಿದ್ದರು.

# ಶ್ರೇಷ್ಠ ಸಂಸ್ಕೃತಿ ಹೊಂದಿರುವ ಹಿಂದೂ ಧರ್ಮ

## ಹರಪನಹಳ್ಳಿಯಲ್ಲಿ ರಾಮಘಟ್ಟದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ



ಹರಪನಹಳ್ಳಿ, ಫೆ.20- ಹಿಂದೂ ಧರ್ಮ ಶ್ರೇಷ್ಠ ಸಂಸ್ಕೃತಿ ಹೊಂದಿದೆ. ಈ ಧರ್ಮ ಸಭ್ಯತೆ ಮತ್ತು ಸಂಸ್ಕಾರ ಎರಡನ್ನೂ ಜಗತ್ತಿಗೆ ನೀಡಿದೆ ಎಂದು ರಾಮಘಟ್ಟದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಚಿರಸ್ತಹಳ್ಳಿಯಲ್ಲಿ ಶ್ರೀ ಕೊಲ್ಲಮ್ಮ ದೇವಿ ನೂತನ ಶಿಲಾಮೂರ್ತಿ ಪ್ರತಿಷ್ಠಾಪನೆ ನೆರವೇರಿಸಿ ಶ್ರೀಗಳು ಮಾತನಾಡಿದರು. ದೇವಾಲಯಗಳು ಶಾಂತಿ, ಸಾಮರಸ್ಯ ಬೆಳೆಸುವ ಪವಿತ್ರ ಕೇಂದ್ರಗಳಾಗಿವೆ. ದೇವರಿಗೆ ಅನೇಕ ಹೆಸರುಗಳಿದ್ದರೂ ಶಕ್ತಿ ಮೂಲ ಒಂದೇಯಾಗಿದೆ

ಗ್ರಾಮದ ಪ್ರತಿ ವಿದ್ಯಾರ್ಥಿಯೂ ಶಿಕ್ಷಣ ಪಡೆದು ವಿದ್ಯಾವಂತರಾಗಬೇಕು. ಪರಸ್ಪರ ಗೌರವಿಸುವ ಭಾವನೆ ಬೆಳೆಸಿಕೊಳ್ಳಬೇಕು ಎಂದರು.

ಮಲ್ಲಿಕಾರ್ಜುನ ಸ್ವಾಮಿ ಕಲ್ಮಠ ಮಾತನಾಡಿ, ಭಾರತದಲ್ಲಿ ಹಲವಾರು ಧರ್ಮಗಳು ಮತ್ತು ಆಚರಣೆಗಳು ಬೆಳೆದು ಬಂದಿವೆ. ಸತ್ಯ, ಸಂಸ್ಕೃತಿ ಮತ್ತು ಆದರ್ಶಗಳನ್ನು ಎತ್ತಿ ಹಿಡಿಯಲು ಈ ನಾಡಿನ ಮಠ ಮಂದಿರಗಳು ಕಾರ್ಯ ಮಾಡುತ್ತಾ ಬಂದಿವೆ. ದೇವಾಲಯಗಳ ಮೇಲಿರುವ ನಂಬಿಗೆ ದೇವರಲ್ಲಿಟ್ಟಿರುವ ಶ್ರದ್ಧೆ ಅಪಾರ. ಆಧುನಿಕತೆಯ ಹೆಸರಿನಲ್ಲಿ ಜನರ ಭಾವನೆಗಳನ್ನು ಕಲುಷಿತಗೊಳಿಸಬಾರದು ಎಂದು ಹೇಳಿದರು.

ಸಮಾರಂಭದಲ್ಲಿ ಗ್ರಾ.ಪಂ.ಸದಸ್ಯ ಚನ್ನಮಲ್ಲಿಕಾರ್ಜುನ ಸ್ವಾಮಿ, ವಿ.ಎಸ್.ಎಸ್.ಎನ್ ನಿರ್ದೇಶಕ ಹೆಚ್.ಪರಮೇಶ್ವರಪ್ಪ, ಟಿ.ಪ್ರಭಾಕರ್, ಮುಖಂಡರಾದ ಬಿ.ಹೆಚ್.ಬಸವರಾಜಪ್ಪ, ಭೋವಿ ರಾಜಪ್ಪ, ದುರುಗಪ್ಪ ಸುಮಲತಾ, ರೇಣುಕ ಪ್ರಸಾದ ಕಲ್ಮಠ ಗ್ರಾಮಸ್ಥರು ಭಾಗವಹಿಸಿದ್ದರು.

# ತ್ಯಾವಣಗಿಯಲ್ಲಿ ಸಾಮೂಹಿಕ ವಿವಾಹ

ಚನ್ನಗಿರಿ, ಫೆ. 20 - ತಾಲ್ಲೂಕಿನ ತ್ಯಾವಣಿಗೆ ಸಮೀಪದ ಹರನಹಳ್ಳಿ - ಕೆಂಗಾಪುರದ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ಮಾರ್ಚ್ 5 ರಿಂದ 10 ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಮಾರ್ಚ್ 9 ರ ಶನಿವಾರ ಶ್ರೀ ಸಮರ್ಥ ಸದ್ಗುರು ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಗಳ 48 ನೇ ವರ್ಷದ ಮುಳ್ಳು ಗದ್ದಿಗೆ ಉತ್ಸವ, ಉಚಿತ ಸಾಮೂಹಿಕ ವಿವಾಹ, ಜವಳ ಹಾಗೂ ಕುಂಭಾಭಿಷೇಕ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಮೊ.ಸಂ : 9606297544 ಅಥವಾ 9845409510.


## ಹೃದಯಪೂರ್ವಕ ಅಭಿನಂದನೆಗಳು



ಶ್ರೀ ಕೋಗುಂಡಿ ಬಕ್ಕೇಶಪ್ಪ



ಶ್ರೀ ವಿ. ವಿಕ್ರಮ್

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗೆ ನಿರ್ದೇಶಕರಾಗಿ ಆಯ್ಕೆಯಾಗಿರುವ **ಶ್ರೀ ಕೋಗುಂಡಿ ಬಕ್ಕೇಶಪ್ಪ** ಅವರಿಗೂ ಮತ್ತು **ಶ್ರೀ ವಿ. ವಿಕ್ರಮ್** ಅವರಿಗೂ ಹೃದಯಪೂರ್ವಕ ಅಭಿನಂದನೆಗಳು.

**Danger boys KGM boys**

ಎಸ್.ಎಸ್. ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗ, ಅಣ್ಣಾನಗರ



# ನಾಳೆ E-ಲೂನಾ ಗ್ರಾಹಕರಿಗೆ ವಿತರಣೆ



ಹೊಸ ಅವತಾರದಲ್ಲಿ ಲೂನಾ ಲಾಂಚ್

80ರ ದಶಕದ ಚಲ್ ಮೇರಿ ಲೂನಾ ಈಗ ಎಲೆಕ್ಟ್ರಿಕ್ ವಾಹನ



ದಾವಣಗೆರೆ, ಫೆ. 20- ಹಳೆ ಲೂನಾ ಮಾದರಿಯಲ್ಲಿಯೇ ಹೊಸತನ್ನು ಕೂಡಾ ಬಹು ಉಪಯೋಗಿ ಬಳಕೆಗೆ ಅನುಕೂಲವಾಗುವ ರೀತಿಯಲ್ಲಿ ಹಳೆಯ ಮಾದರಿಯಂತೆ ಹಾಲೊಜನ್ ಲೈಟ್‌ಗಳನ್ನು ಬಳಕೆ ಮಾಡಿ E-ಲೂನಾ ತಯಾರಿಸಲಾಗಿದ್ದು, ನಾಳೆ ದಿನಾಂಕ 22.02.2024ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಗ್ರಾಹಕರ ಕೈ ಸೇರಲಿದೆ.

ಮಹಿಳೆಯರ ಪ್ರೆಸ್ಟೀಜ್ ಆಗಿದ್ದ ಕೈನೆಟಿಕ್ ಲೂನಾವನ್ನು ಈಗಿನ ಪೆಟ್ರೋಲ್, ಡೀಸೆಲ್ ಅಭಾವದ ಮುನ್ನೆಚ್ಚರಿಕೆಗಳನ್ನು ಗಮನದಲ್ಲಿರಿಸಿಕೊಂಡು ಪೂನಾದ ಕೈನೆಟಿಕ್ ಗ್ರೀನ್ ಎನರ್ಜಿ ಮತ್ತು ಪವರ್ ಸಲ್ಯೂಷನ್ ಲಿಂ. ಕಂಪನಿಯು ಭಾರತಾದ್ಯಂತ ನೂತನ ಶೋ ರೂಂ ಆರಂಭಿಸಿದೆ.

ದಾವಣಗೆರೆಯಲ್ಲಿ ಕೈನೆಟಿಕ್ ಕಂಪನಿ ವಾಹನಗಳ ಅಧಿಕೃತ ಮಾರಾಟಗಾರರು, ವಿತರಕರೂ ಆಗಿರುವ ಹಾಗೂ 1984ರಲ್ಲಿ ಆಲ್ ಇಂಡಿಯಾ ನಂಬರ್ ಒನ್ ಡೀಲರ್ ಪ್ರಶಸ್ತಿ ಪುರಸ್ಕೃತರಾಗಿರುವ ಶ್ರೀ ಮಲ್ಲಿಕಾರ್ಜುನ ಸಮೂಹ ಸಂಸ್ಥೆಯ ಅಧ್ಯಕ್ಷರು, ಹಿರಿಯ ಆಟೋಮೊಬೈಲ್ ಉದ್ಯಮಿ ಎನ್.ಜೆ. ಗುರುಸಿದ್ಧಯ್ಯ ಅವರ ಅಧ್ಯಕ್ಷತೆಯಲ್ಲಿ ಕೈನೆಟಿಕ್ ಕಂಪನಿ ಪೂನಾದ ವೈಸ್ ಪ್ರೆಸಿಡೆಂಟ್ ವಿಜಯಭಟ್, ರೀಜನಲ್ ಮ್ಯಾನೇಜರ್ ಕೆ.ಎನ್. ಕಾರ್ತಿಕ್ ಅವರು ನಾಳೆ ದಿ. 22ರ ಗುರುವಾರ ನಡೆಯುವ ಕಾರ್ಯಕ್ರಮದಲ್ಲಿ E-ಲೂನಾ ವಾಹನಗಳನ್ನು ಗ್ರಾಹಕರಿಗೆ ವಿತರಣೆ ಮಾಡುವರು.

ಈ ವಾಹನಗಳ ಮಾಹಿತಿಯನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದ್ದು, ಶ್ರೀ ಮಲ್ಲಿಕಾರ್ಜುನ ಮೋಟಾರ್ಸ್ ಮತ್ತು ಸ್ಕೂಟರ್ ಮಾರ್ಟ್, 868/1, ಪಿ.ಬಿ. ರಸ್ತೆ, ಶ್ರೀ ಶಂಕರ ವಿಹಾರ ಬಡಾವಣೆ, ದಾವಣಗೆರೆಯ ಅಧಿಕೃತ ಡೀಲರ್ಸ್ ಇಲ್ಲಿ ಬುಕ್ಕಿಂಗ್ ಹಾಗೂ ನೂತನ ವಾಹನ ಸವಾರಿ ಮಾಡಬಹುದಾಗಿದೆ ಎಂದು ಗುರುಸಿದ್ದಯ್ಯ ತಿಳಿಸಿದ್ದಾರೆ.

ಮಾಹಿತಿಗೆ 6363585424, 8618366071 ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ.

Advt


# ಕವಿ ಸರ್ವಜ್ಞರ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಅಗತ್ಯ

## ಸರ್ವಜ್ಞರ ಜಯಂತ್ಯೋತ್ಸವದಲ್ಲಿ ಹೊನ್ನಾಳಿ ತಹಶೀಲ್ದಾರ್ ಪಟ್ಟರಾಜಗೌಡ



ಹೊನ್ನಾಳಿ, ಫೆ. 20- ತ್ರಿಕಾಲ ಜ್ಞಾನಿ ಸರ್ವಜ್ಞರ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳು, ಆವಿಷ್ಕಾರಗಳು ಆಗಬೇಕಾಗಿದೆ ಎಂದು ತಹಶೀಲ್ದಾರ್ ಪಟ್ಟರಾಜಗೌಡ ಅವರು ಹೇಳಿದರು.

ತಾಲ್ಲೂಕು ಆಡಳಿತ ಹಮ್ಮಿಕೊಂಡಿದ್ದ ಸರ್ವಜ್ಞರ ಜಯಂತಿ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸರ್ವಜ್ಞ ಅವರು ಭೂತಕಾಲ, ವರ್ತಮಾನ ಕಾಲ ಹಾಗೂ ಭವಿಷ್ಯತ್ ಕಾಲದ ಬಗ್ಗೆ ಹೇಳಿದ್ದು, ಬಹುತೇಕ ಅವೆಲ್ಲವೂ ಸತ್ಯಕ್ಕೆ ಹತ್ತಿರವಾಗಿವೆ. ಈ ಸಮಾಜಕ್ಕೆ ಅವರು ಕೊಟ್ಟ ಸಾಹಿತ್ಯ ವಿಶಿಷ್ಟವಾಗಿದೆ.

ಆದ್ದರಿಂದ ಅವರ ಬಗ್ಗೆ ಇನ್ನೂ ತಿಳಿದುಕೊಳ್ಳುವಷ್ಟು ವಿಷಯಗಳು ಸಾಕಷ್ಟಿವೆ. ಆದ್ದರಿಂದ ಅವರು ಯಾವ ಜಾತಿ, ಸಮುದಾಯ ಎಂಬುದು ಇಲ್ಲಿ ಮುಖ್ಯವಲ್ಲ. ಅವರು ಈ ಸಮಾಜದ ಆಸ್ತಿ. ಆದ್ದರಿಂದ ಅವರ ಕುರಿತ ಇನ್ನೂ ಹೆಚ್ಚಿನ ಅಧ್ಯಯನ ಅಗತ್ಯ ಎಂದರು.

ತಾಲ್ಲೂಕು ಕುಂಬಾರ ಸಮಾಜದ ಅಧ್ಯಕ್ಷ ಬಸವರಾಜಪ್ಪ ಸಾಸ್ವೆಹಳ್ಳಿ ಮಾತನಾಡಿ, ಕುಂಬಾರ ಸಮಾಜ ಹಿಂದುಳಿದಿದ್ದು, ಎಲ್ಲರೂ ಸಂಘಟಿತರಾಗಬೇಕಾಗಿದೆ. ಈ ಮೂಲಕ ನಮ್ಮ ಬೇಡಿಕೆಗಳನ್ನು ಸರ್ಕಾರದ ಹಂತದಲ್ಲಿ ಈಡೇರಿಸಿಕೊಳ್ಳುವ ಮೂಲಕ ಸಮಾಜ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪನ್ನು ಮೂಡಿಸಬೇಕಾಗಿದೆ ಎಂದರು.

ಹಿರೇಮಠದ ಬಸವರಾಜಪ್ಪ ಸರ್ವಜ್ಞರ ಕುರಿತು ಉಪನ್ಯಾಸ ನೀಡಿದರು. ಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಜಿ. ಸುರೇಂದ್ರಗೌಡ, ಗ್ರೇಡ್-2 ತಹಶೀಲ್ದಾರ್ ಸುರೇಶ್, ತಾಲ್ಲೂಕು ಕುಂಬಾರ ಸಮಾಜದ ಉಪಾಧ್ಯಕ್ಷ ಅವಿನಾಶ್, ಟೈಲರ್ ಬಸವರಾಜ್, ಕಾರ್ಯದರ್ಶಿ ವಿಜಯ್ ಕುಮಾರ್, ನಗರ ಘಟಕದ ಅಧ್ಯಕ್ಷ ಷಣ್ಮುಖಪ್ಪ, ಪದಾಧಿಕಾರಿಗಳಾದ ಎನ್.ಪಿ. ಗಿರೀಶ್, ಚಿಕ್ಕಜೋಗಿಹಳ್ಳಿ ನಾಗರಾಜ್, ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಮಹೇಶಪ್ಪ, ಶಿವರಾಜ್, ಓಂಕಾರಮ್ಮ, ಡಾ. ವೀಣಾ ಕುಂಬಾರ್, ಶಾರದಮ್ಮ, ರೈತ ಮುಖಂಡ ಅರಬಗಟ್ಟೆ ಬಸವರಾಜಪ್ಪ, ಕರಿಬಸಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದಾವಣಗೆರೆ ಅರ್ಬನ್ ಬ್ಯಾಂಕ್ ಚುನಾವಣೆ : ಕೋಗುಂಡಿ ಬಕ್ಕೇಶಪ್ಪ, ಉಮಾಪತಿ ಗುಂಪಿನ 15 ಜನರೂ ಆಯ್ಕೆ



(1ನೇ ಪುಟದಿಂದ) ಎಂ.ರುದ್ರಮುನಿಸ್ವಾಮಿ (2866), ಪಲ್ಲಾಗಟ್ಟೆ ಶಿವಾನಂದಪ್ಪ (2650), ಪ್ರವರ್ಗ 'ಬಿ' ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಸೋಗಿ ಮುರುಗೇಶ್ (1995) ಅತ್ಯಧಿಕ ಮತಗಳನ್ನು ಗಳಿಸಿ ಚುನಾಯಿತರಾಗಿದ್ದಾರೆ.

ಇದೇ ಗುಂಪಿನಿಂದ ಸ್ಪರ್ಧಿಸಿದ್ದ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಎಂ. ಚಂದ್ರಶೇಖರ್, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ವಿ. ವಿಕ್ರಮ್, ಮಹಿಳಾ ಮೀಸಲು ಕ್ಷೇತ್ರದಿಂದ ಸುರೇಖಾ ಎಂ. ಚಿಗಟೇರಿ ಮತ್ತು ಅರ್ಚನಾ ಡಾ. ರುದ್ರಮುನಿ, ಪ್ರವರ್ಗ 'ಎ' ಮೀಸಲು ಕ್ಷೇತ್ರದಿಂದ ಇ.ಎಂ. ಮಂಜುನಾಥ ಅವರುಗಳು ಅವಿರೋಧವಾಗಿ ಆಯ್ಕೆಯಾಗಿರುವ ನಿರ್ದೇಶಕರು.

ಸಾಮಾನ್ಯ ಕ್ಷೇತ್ರದಿಂದ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ಎಂ.ವಿ. ಜಯಪ್ರಕಾಶ್ ಮಾಗಿ (2251), ಅಖಿಲೇಶ್ ಕೋಗುಂಡಿ (1450) ಮತ್ತು ಎನ್.ಎ. ಗುರುರಾಜ್ (945) ಪರಾಭವಗೊಂಡಿದ್ದಾರೆ.

ಪ್ರವರ್ಗ 'ಬಿ' ಮೀಸಲು ಕ್ಷೇತ್ರದ 1 ಸ್ಥಾನಕ್ಕೆ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ಐವರು ಅಭ್ಯರ್ಥಿಗಳಾದ ಲೆಕ್ಕ ಪರಿಶೋಧಕ ಜಂಬಿಗಿ ರಾದೇಶ್ (1623), ಬೆಳ್ಳೂಡಿ ಮಂಜುನಾಥ್ (1590), ಎಸ್.ವಿ.ಪ್ರಭುಸ್ವಾಮಿ (1137), ಹಂಪಾಳಿ ನಾಗಮಣಿ ಬಸವರಾಜ್ (913) ಮತ್ತು ಎಂ.ಹೆಚ್. ಶಿವಯೋಗೀಶ್ವರ ಸ್ವಾಮಿ (688) ಪರಾಭವಗೊಂಡಿದ್ದಾರೆ.

ನಗರದ ಶ್ರೀ ಶಿವಯೋಗಾಶ್ರಮದ ಆವರಣದಲ್ಲಿ ಮತಗಳ ಎಣಿಕೆ ಕಾರ್ಯ ಇಂದು ನಡೆಯಿತು. ಎನ್.ಜಿ. ರುದ್ರಪ್ಪ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ಮತ್ತು ಇತರರು ಚುನಾವಣಾಧಿಕಾರಿಗಳಿಗೆ ಸಹಾಯಕರಾಗಿದ್ದರು.

# ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಿ.ವಿ. ಪಾಟೀಲ್



## ಹರಿಹರದಲ್ಲಿ ಮಾರ್ಚ್ 18 ರಂದು ಸಮ್ಮೇಳನ

ಹರಿಹರ, ಫೆ.20- ನಗರದ ಸಿದ್ದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಮಾರ್ಚ್ 18 ಮತ್ತು 19 ರಂದು 13 ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿ ಮತ್ತು ಅರ್ಥಪೂರ್ಣ ಆಚರಣೆಗೆ ತೀರ್ಮಾನ ಕೈಗೊಂಡಿದ್ದು, ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ ಪ್ರೊ. ಸಿ.ವಿ. ಪಾಟೀಲ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ನಗರದ ಎಸ್.ಜೆ.ವಿ.ಪಿ. ಕಾಲೇಜು ಸಭಾಂಗಣದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಮಾಜಿ ಶಾಸಕರು ಸೇರಿದಂತೆ, ವಿವಿಧ ಪಕ್ಷಗಳ ರಾಜಕೀಯ ಮುಖಂಡರು, ನಾಡಿನ ಹಲವಾರು ಸಾಹಿತಿಗಳು, ವಿದ್ವಾಂಸರು, ಕನ್ನಡ ಪರ ಸಂಘಟನೆಯವರು, ರೈತರು, ಸರ್ಕಾರಿ ನೌಕರರು ಎಲ್ಲರನ್ನೂ ಒಳಗೊಂಡಂತೆ ರಾಜ್ಯಕ್ಕೆ ಮಾದರಿಯಾಗುವ ನಿಟ್ಟಿನಲ್ಲಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಾಗುವುದು.

ಸಮ್ಮೇಳನದ ಸರ್ವಾಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ, ಪ್ರೊ ಸಿ.ವಿ. ಪಾಟೀಲ್, ಕಲೀಂ ಭಾಷಾ, ಎ.ಬಿ. ರಾಮಚಂದ್ರಪ್ಪ ಅವರ ಹೆಸರುಗಳು ಮುನ್ನೆಲೆಗೆ ಬಂದು ಅದರಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ವಿ ಪಾಟೀಲ್ ಹೆಸರು ಹೆಚ್ಚು ಮುನ್ನೆಲೆಯಲ್ಲಿ ಬಂದಿದ್ದರಿಂದ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯರಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ್, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಹಿಂದುಳಿದ ವರ್ಗಗಳ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷ ಮರಿಯೋಜಿರಾವ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಬಿ ದಿಳ್ಳೆಪ್ಪ ರೇವಣಸಿದ್ದಪ್ಪ ಅಂಗಡಿ, ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಜಿಲ್ಲಾ ಸದಸ್ಯರಾದ ಎ. ರಿಯಾಜ್ ಆಹ್ಮದ್, ಸತ್ಯಭಾಮ ಮಂಜುನಾಥ್, ತಾಲ್ಲೂಕು ಗೌರವ ಕಾರ್ಯದರ್ಶಿ ಎಂ. ಚಿದಾನಂದ ಕಂಚಿಕೇರಿ, ಗೌರವ ಕಾರ್ಯದರ್ಶಿ ಬಿ.ಬಿ. ರೇವಣ್ಣನಾಯ್ಕ್, ಕಸಾಪ ಹೋಬಳಿ ಘಟಕದ ದಂಡಿ ತಿಪ್ಪೇಸ್ವಾಮಿ, ಸದಾನಂದ, ಮಹಿಳಾ ಘಟಕದ ಅಧ್ಯಕ್ಷೆ ಕೆ.ಟಿ. ಗೀತಾ, ಕಸಾಪ ಸದಸ್ಯರಾದ ಸುರೇಶ್ ಕುಣೆಬೆಳಕೆರೆ, ಎಂ. ಉಮ್ಮಣ್ಣ, ನಾಗರಾಜ್, ದೂಡಾ ಮಾಜಿ ಸದಸ್ಯ ಹೆಚ್.ನಿಜಗುಣ, ಕಾಂಗ್ರೆಸ್ ಪಕ್ಷದ ಮುಖಂಡರಾದ ಸಿ. ಎನ್. ಹುಲುಗೇಶ್, ಕೆ.ಬಿ. ರಾಜಶೇಖರ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಈಶಪ್ಪ ಬೂದಿಹಾಳ, ಸಾಹಿತ್ಯ ಸಂಗಮ ಅಧ್ಯಕ್ಷ ವಿ.ಬಿ. ಕೊಟ್ರೇಶ್, ಕಾರ್ಯದರ್ಶಿ ಎನ್.ಇ. ಸುರೇಶ್ ಚಿಂತನ ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ, ಫ್ರಾನ್ಸಿಸ್, ಪತ್ರಕರ್ತರಾದ ಶೇಖರಗೌಡ, ಅಣ್ಣಪ್ಪ ಲಕ್ಕಶೆಟ್ಟಿಹಳ್ಳಿ, ಸಂತೋಷ ಗುಡಿಮನಿ, ಶೇಕ್, ಎಬಿವಿಪಿ ವೀರೇಶ್ ಅಜ್ಜಣ್ಣನವರ್, ಕನ್ನಡ ಪರ ಸಂಘಟನೆ ಮುಖಂಡರಾದ ಕವಿತಾ ಪೇಟೆಮಠ್, ನಾಗರಾಜ್ ಭಂಡಾರಿ, ಹೆಚ್.ಸುಧಾಕರ, ಇಲಿಯಾಸ್ ಆಹ್ಮದ್, ಪ್ರೀತಂ ಬಾಬು, ಶಶಿನಾಯ್ಕ್, ಭಾಗ್ಯಮ್ಮ ನಾಗಮ್ಮ ಐರಣಿಯಮ್ಮ ರಾಹುಲ್ ಮೆಹರ್ವಾಡೆ, ಶ್ವೇತಾ, ಮೇಘ, ವಾಸು ಕುಂಬಳೂರು ಇತರರು ಹಾಜರಿದ್ದರು.

# ಸಿ.ಜಿ. ಆಸ್ಪತ್ರೆಗೆ ಜಿಲ್ಲಾಧಿಕಾರಿ ಅನಿರೀಕ್ಷಿತ ಭೇಟಿ



ದಾವಣಗೆರೆ, ಫೆ.20- ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ. ಎಂವಿ. ವೆಂಕಟೇಶ್ ಅವರು ಮಂಗಳವಾರ ಅನಿರೀಕ್ಷಿತ ಭೇಟಿ ನೀಡಿ, ಹೆರಿಗೆ ವಾರ್ಡ್, ತುರ್ತು ನಿಗಾ ಘಟಕ ಹಾಗೂ ಹೊಸದಾಗಿ ಆರಂಭವಾಗಿರುವ ಡಯಾಲಿಸಿಸ್ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿ, ರೋಗಿಗಳ ಯೋಗಕ್ಷೇಮ ವಿಚಾರಿಸಿದರು. ಡಯಾಲಿಸಿಸ್ ಘಟಕದಲ್ಲಿ ರೋಗಿಗಳಿಗೆ ಬೇಕಾದ ಡಯಾಲಿಸಿಸ್ ಕಿಟ್‌ಗಳ ದಾಸ್ತಾನು ಮತ್ತು ಔಷಧ ದಾಸ್ತಾನಿಟ್ಟುಕೊಂಡು ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚನೆ ನೀಡಿದರು. ಹೆರಿಗೆ ವಾರ್ಡ್‌ಗೆ ಭೇಟಿ ನೀಡಿ, ಹೆರಿಗೆ ಪೂರ್ವ ಮತ್ತು ಹೆರಿಗೆ ನಂತರದಲ್ಲಿ ಸರಿಯಾದ ಚಿಕಿತ್ಸೆ ಲಭ್ಯವಾಗಬೇಕು. ಇದರಿಂದ ತಾಯಿ ಮಗುವಿನ ಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಲು ಅಗತ್ಯವಿರುವವರಿಗೆ ತೀವ್ರ ನಿಗಾ ಘಟಕದಲ್ಲಿ ಸೂಕ್ತವಾದ ಚಿಕಿತ್ಸೆ ಲಭ್ಯವಾಗುವಂತೆ ನೋಡಿಕೊಳ್ಳಲು ಸೂಚನೆ ನೀಡಿದರು. ಈ ವೇಳೆ ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ ಉಪಸ್ಥಿತರಿದ್ದರು.

# ಚುನಾವಣೆ ಒಳಗೆ ಜಿಲ್ಲಾ ಕ್ರೀಡಾಂಗಣದ ಸಿಂಥೆಟಿಕ್ ಟ್ರ್ಯಾಕ್ ಶಂಕುಸ್ಥಾಪನೆ: ಸಂಸದ ಜಿ.ಎಂ. ಸಿದ್ದೇಶ್ವರ

## ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟನೆ



ದಾವಣಗೆರೆ, ಫೆ. 20 - ಜಿಲ್ಲಾ ಕ್ರೀಡಾಂಗಣಕ್ಕೆ ಸಿಂಥೆಟಿಕ್ ಟ್ರ್ಯಾಕ್ ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಸಂಸದ ಜಿ.ಎಂ.ಸಿದ್ದೇಶ್ವರ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮುಂಚೆ 8.5 ಕೋಟಿ ರೂ. ಗಳ ಈ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲು ಪ್ರಯತ್ನಿಸಲಾಗುವುದು ಎಂದವರು ಹೇಳಿದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕ್ರೀಡೆಗೆ ಹೆಚ್ಚು ಒತ್ತು ನೀಡಿದ್ದಾರೆ. ಇದರಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಕ್ರೀಡಾಪಟುಗಳು ಸಾಧನೆ ಮಾಡಲು ನೆರವಾಗಿದೆ ಎಂದವರು ಹೇಳಿದರು.

ಸರ್ಕಾರಿ ನೌಕರರಾದ ನಂತರ ಹಲವರು ಐ.ಎ.ಎಸ್. ಹಾಗೂ ಐ.ಪಿ.ಎಸ್. ಹುದ್ದೆಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ. ಇನ್ನಷ್ಟು ನೌಕರರು ಈ ಸ್ಥಾನ ಪಡೆದುಕೊಳ್ಳಲಿ ಎಂದು ಆಶಿಸಿದರು.

ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಮಾತನಾಡಿ, ಕ್ರೀಡೆಯಿಂದ ಉದ್ಯೋಗದಲ್ಲಿ ದಕ್ಷತೆ, ಕ್ರಿಯಾಶೀಲತೆ ಹಾಗೂ ಆವಿಷ್ಕಾರಿ ಚಿಂತನೆ ತರಲು ಸಾಧ್ಯ. ಮೊಬೈಲ್ ವ್ಯಸನದಂತಹ ಸಮಸ್ಯೆಗಳಿಂದ ಹೊರ ಬರಲೂ ಕ್ರೀಡೆ ನೆರವಾಗುತ್ತದೆ ಎಂದರು.

ಕೇವಲ 60 ವರ್ಷವಷ್ಟೇ ಅಲ್ಲ, 80 ವರ್ಷದವರೆಗೂ ರೋಗ ಮುಕ್ತವಾಗಿ ಚಟುವಟಿಕೆಯಿಂದ ಇರಲು ಕ್ರೀಡೆ ನೆರವಾಗುತ್ತದೆ. ಕ್ರೀಡೆಗಳಿಂದ ದೇಹಕ್ಕೆ ಶಕ್ತಿ ಸಿಗುತ್ತದೆ. ಪ್ರತಿಯೊಬ್ಬರೂ ಒಂದಲ್ಲಾ ಒಂದು ಕ್ರೀಡೆಯಲ್ಲಿ ತೊಡಗಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ, ಈ ಬಾರಿ ಜೂನ್ - ಜುಲೈ ತಿಂಗಳಲ್ಲಿ ರಾಜ್ಯ ಮಟ್ಟದ ನೌಕರರ ಪಂದ್ಯಾವಳಿ ನಡೆಯಲಿದೆ. ಈ ಪಂದ್ಯಾವಳಿಯಲ್ಲಿ ದಾವಣಗೆರೆ ಜಿಲ್ಲೆ ಗೆಲ್ಲುವಂತಾಗಬೇಕು ಎಂದರು.

ಇದೇ ದಿನಾಂಕ 27ರಂದು ಸರ್ಕಾರಿ ನೌಕರರ ರಾಜ್ಯ ಸಮ್ಮೇಳನ ನಡೆಯಲಿದೆ. 7ನೇ ವೇತನ ಆಯೋಗ ಹಾಗೂ ಹಳೆಯ ಪಿಂಚಣಿ ಯೋಜನೆ ಜಾರಿ ಸೇರಿದಂತೆ ಹಲವಾರು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ಷಡಾಕ್ಷರಿ ಹೇಳಿದರು.

ಯುವ ಯೋಗ ಪಟುಗಳಾದ ಸೃಷ್ಟಿ, ನಮಿತ ಹಾಗೂ ಅನುಷ್ಕ ಅವರು ಯೋಗ ನೃತ್ಯ ಪ್ರದರ್ಶನ ನೀಡಿದರು.

ವೇದಿಕೆಯ ಮೇಲೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಆರ್. ಜಯಲಕ್ಷ್ಮಿ ಬಾಯಿ, ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ವೀರೇಶ ಎಸ್. ಒಡೇನಪುರ, ಪದಾಧಿಕಾರಿಗಳಾದ ಸಿ. ಗುರುಮೂರ್ತಿ, ಬಿ. ಆರ್. ತಿಪ್ಪೇಸ್ವಾಮಿ, ಮಂಜಮ್ಮ ಬಿ. ಪಾಲಾಕ್ಷಿ, ಹೆಚ್. ಬಸವರಾಜ, ಸಿ. ತಿಪ್ಪೇಸ್ವಾಮಿ, ಕೆ.ಎಂ. ಹೆಚ್. ಸ್ವಾಮಿ, ಬಿ. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ರೈತರ ಪ್ರತಿಭಟನೆ : 177 ಸಾಮಾಜಿಕ ಮಾಧ್ಯಮ ಖಾತೆ, ಲಿಂಕ್‌ಗಳಿಗೆ ತಡೆ

ನವದೆಹಲಿ, ಫೆ. 20 – ರೈತರ ಪ್ರತಿಭಟನೆಯ ಜೊತೆ ಸಂಬಂಧ ಹೊಂದಿರುವ 177 ಸಾಮಾಜಿಕ ಮಾಧ್ಯಮ ಖಾತೆಗಳು ಹಾಗೂ ವೆಬ್ ಲಿಂಕ್‌ಗಳನ್ನು ತಡೆಯಲು ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ ಎಂದು ಮೂಲಗಳು ತಿಳಿಸಿವೆ.

ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಈ ಬಗ್ಗೆ ಆದೇಶ ಹೊರಡಿಸಿದೆ. ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

# ಚಂಡೀಘಡ ಚುನಾವಣಾಧಿಕಾರಿ ವಿರುದ್ಧ ಕ್ರಮಕ್ಕೆ ಸುಪ್ರೀಂ ಕೋರ್ಟ್ ಆದೇಶ

ನವದೆಹಲಿ, ಫೆ. 20 – ಸುಪ್ರೀಂ ಕೋರ್ಟ್ ಎದುರು ತಪ್ಪು ಹೇಳಿಕೆ ನೀಡಿದ ಹಾಗೂ ಚಂಡೀಘಡ ಮೇಯರ್ ಚುನಾವಣೆಯ ಮತ ಎಣಿಕೆಯಲ್ಲಿ ದುಷ್ಕೃತ್ಯ ಎಸಗಿರುವ ಕಾರಣಕ್ಕಾಗಿ ಚುನಾವಣಾಧಿಕಾರಿ ಅನಿಲ್ ಮಸೀಹ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ನ್ಯಾಯಾಲಯ ಆದೇಶಿಸಿದೆ.

ಚುನಾವಣಾ ಅಧಿಕಾರಿಯಾಗಿ ಮಸೀಹ್ ಗಂಭೀರ ದುಷ್ಕೃತ್ಯ ಎಸಗಿರುವುದು ಕಂಡು ಬಂದಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ.

# ಪೌರಕಾರ್ಮಿಕರ ನೇಮಕ : ಮಧ್ಯವರ್ತಿಗಳಿಗೆ ಮಾರು ಹೋಗದೇ ಎಚ್ಚರದಿಂದಿರಿ : ರೇಣುಕಾ



ದಾವಣಗೆರೆ, ಫೆ. 20 - ಮಹಾನಗರ ಪಾಲಿಕೆಯಿಂದ ಪೌರಕಾರ್ಮಿಕರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಿ, ಪರಿಶೀಲನೆ ಹಂತದಲ್ಲಿ ಇದೆ ಎಂದು ಎಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.


ಮಹಾನಗರ ಪಾಲಿಕೆಯಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ, ದಿನಗೂಲಿ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರಿಂದ ಮಧ್ಯವರ್ತಿ, ಅನ್ಯ ವ್ಯಕ್ತಿಗಳು ಕೆಲಸ ಕೊಡಿಸುವುದಾಗಿ ತಿಳಿಸಿ, ಹಣ ವಸೂಲಿ ಮಾಡುತ್ತಿರುವುದು ಪಾಲಿಕೆಯ ಗಮನಕ್ಕೆ ಬಂದಿರುತ್ತದೆ. ಈ ನೇಮಕಾತಿ ಪ್ರಕ್ರಿಯೆಯು ಸರ್ಕಾರದ ಅಧಿಸೂಚನೆಯಂತೆ ಸಂಪೂರ್ಣ ಪಾರದರ್ಶಕವಾಗಿ ನಡೆಯುತ್ತಿದ್ದು, ಅರ್ಜಿದಾರರು ಯಾವುದೇ ವ್ಯಕ್ತಿಗಳಿಗೆ ಹಣ ನೀಡಬಾರದು, ಒಂದು ವೇಳೆ ಅರ್ಜಿದಾರರು ಮಧ್ಯವರ್ತಿ, ಅನ್ಯ ವ್ಯಕ್ತಿಗಳಿಗೆ ಹಣ ನೀಡಿ ಮೋಸ ಹೋದಲ್ಲಿ ಅದಕ್ಕೆ ಪಾಲಿಕೆಯು ಜವಾಬ್ದಾರರಾಗುವುದಿಲ್ಲ ಎಂದು ಅವರು ಎಚ್ಚರಿಸಿದ್ದಾರೆ.

# ಡಿ.ಪಿ.ಐ.ಐ.ಟಿ. ಮಾಜಿ ಅಧಿಕಾರಿ ಮೇಲೆ ಸಿಬಿಐ ದಾಳಿ

ನವದೆಹಲಿ, ಫೆ. 20 – ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ಆಸ್ತಿ ಗಳಿಸಿದ ಆರೋಪದ ಮೇಲೆ ಕೈಗಾರಿಕಾ ಉತ್ತೇಜನ ಹಾಗೂ ಆಂತರಿಕ ವ್ಯಾಪಾರ (ಡಿ.ಪಿ.ಐ.ಐ.ಟಿ.) ಇಲಾಖೆ ಮಾಜಿ ಕಾರ್ಯದರ್ಶಿ ಮನೆ ಮೇಲೆ ಸಿ.ಬಿ.ಐ. ದಾಳಿ ನಡೆಸಿದೆ. ರಮೇಶ್ ಅಭಿಷೇಕ್ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಖಾಸಗಿ ಕಂಪನಿಗಳ ಸಂಪರ್ಕದಲ್ಲಿದ್ದರು. ನಿವೃತ್ತಿ ನಂತರ ಸಲಹೆ ಹೆಸರಿನಲ್ಲಿ ಭಾರೀ ಮೊತ್ತ ಪಡೆದಿದ್ದರು ಎಂದು ಸಿ.ಬಿ.ಐ. ಆರೋಪಿಸಿದೆ.

ಅಭಿಷೇಕ್ ಜೊತೆಗೆ ಅವರ ಮಗಳು ವನೆಸಾ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ತಂದೆ ಹಾಗೂ ಮಗಳು ಸೇರಿಕೊಂಡು ವಿವಿಧ ಸಂಸ್ಥೆಗಳಿಂದ ಭಾರೀ ಪ್ರಮಾಣದ ವೃತ್ತಿಪರ ಶುಲ್ಕ ಪಡೆದಿದ್ದಾರೆ. ನಿವೃತ್ತಿಗೆ ಮುಂಚೆ ಅಧಿಕಾರಿ ಇದೇ ಕಂಪನಿಗಳ ಜೊತೆ ಅಧಿಕೃತ ಸಂಪರ್ಕ ಹೊಂದಿದ್ದರು ಎಂದು ಆರೋಪಿಸಲಾಗಿದೆ.

# ಚಿದಾನಂದ ಗುರುಸ್ವಾಮಿ ಹರಪನಹಳ್ಳಿ ಉಪವಿಭಾಗಾಧಿಕಾರಿ



ಹರಪನಹಳ್ಳಿ, ಫೆ.20- ಹೂವಿನಹಡಗಲಿ, ಹರಪನಹಳ್ಳಿ ಹಾಗೂ ಕೊಟ್ಟೂರು ತಾಲ್ಲೂಕುಗಳನ್ನು ಒಳಗೊಂಡ ಹರಪನಹಳ್ಳಿ ಕಂದಾಯ ಉಪವಿಭಾಗಧಿಕಾರಿಯಾಗಿ ಚಿದಾನಂದ ಗುರುಸ್ವಾಮಿ ಅವರನ್ನು ಸರ್ಕಾರ ವರ್ಗಾವಣೆಗೊಳಿಸಿ ಆದೇಶಿಸಿದೆ. ಇಲ್ಲಿಯವರೆಗೂ ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು. ಇವರು ಮೂಲತಃ ಬೆಳಗಾವಿ ಜಿಲ್ಲಾ ಅಥಣಿ ತಾಲ್ಲೂಕಿನವರು. ಹರಪನಹಳ್ಳಿ ಎಸಿಯಾಗಿ ಈವರೆಗೂ ಸೇವೆ ಸಲ್ಲಿಸುತ್ತಿದ್ದ ಟಿ.ವಿ.ಪ್ರಕಾಶ್ ಅವರನ್ನು ಹಿರಿಯೂರು ರಾಷ್ಟ್ರೀಯ ಹೆದ್ದಾರಿಯ ಭೂಸ್ವಾಧೀನ ಅಧಿಕಾರಿಯಾಗಿ ವರ್ಗಾಯಿಸಲಾಗಿದೆ

# ಮಹಿಳಾ ದಿನಾಚರಣೆ : 11 ರಂದು ಸ್ಪರ್ಧೆ

ದಾವಣಗೆರೆ, ಫೆ.20- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಕದಳಿ ಮಹಿಳಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಬರುವ ಮಾರ್ಚ್ 11ರ ಸೋಮವಾರ ವಿವಿಧ ಸಂಘ, ಸಂಸ್ಥೆಗಳು ಮತ್ತು ಸಮಾಜಗಳ ಸದಸ್ಯರು, ಕದಳಿ ಸದಸ್ಯರಿಗೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸೌಮ್ಯ ಸತೀಶ್ (9449422357), ನಂದಿನಿ ಗಂಗಾಧರ್ (7899542949) ಅವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕದಳಿ ವೇದಿಕೆಯ ಕಾರ್ಯದರ್ಶಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.


# ನಗರದಲ್ಲಿ ಇಂದು ಆರೋಗ್ಯ ಶಿಬಿರ

ಎಸ್.ಎಸ್ ಕೇರ್ ಟ್ರಸ್ಟ್ ವತಿಯಿಂದ ಸಂಚಾರಿ ಆರೋಗ್ಯ ವಾಹನದಲ್ಲಿ 30 ವರ್ಷ ಮೇಲ್ಪಟ್ಟವರಿಗೆ ಉಚಿತ ಆರೋಗ್ಯ ತಪಾಸಣೆಯನ್ನು ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3.30 ರವರೆಗೆ ರಾಮನಗರದ ಕಾಳಮ್ಮ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದೆ.

ಉಚಿತ ಬಿ.ಪಿ ತಪಾಸಣೆ, ರಕ್ತದ ಸಕ್ಕರೆ ತಪಾಸಣೆ, ಇ.ಸಿ.ಜಿ ಪರೀಕ್ಷೆ, ನೇತ್ರ ತಪಾಸಣೆ, ಹೃದಯ ತಪಾಸಣೆ ಹಾಗು ನುರಿತ ವೈದ್ಯರಿಂದ ಸಂಪೂರ್ಣ ಆರೋಗ್ಯ ತಪಾಸಣೆ ಹಾಗು ಸಮಾಲೋಚನೆ ಮಾಡಲಾಗುವುದು.

ಆಶೂಜಿ
ಬೇಕಾಗಿದ್ದಾರೆ
JOB DESIGNATIONS WANTED
☛ Sales Man
☛ Sales Girl
Interested can call between 10.00 Am to 6.00 PM on below number and book your appointment, while coming for appointment...
Get proper resume along with a photo attested & a xerox of your Adhaar Card.
Address
ASHUJI DISTRIBUTORS
[Godown ]
# 323 / 1d, Binny company road, Davangere.
M : 91481 47600

ಸವಿನೆನಪು



ದಿ|| ಆಲೂರು ಚಂದ್ರಶೇಖರಪ್ಪನವರು
ನಿಧನ : 1982

ನಿಮ್ಮ ದಿವ್ಯ ಸ್ಮರಣೆಯೇ ನಮಗೆ ಶ್ರೀರಕ್ಷೆ



ದಿ|| ಶ್ರೀಮತಿ ಸುನಂದಮ್ಮ ಚಂದ್ರಶೇಖರಪ್ಪನವರು
ನಿಧನ : 2022

- ಡಾ|| ಮಂಜುನಾಥ್ ಆಲೂರು, DEAN, JJM Medical College, Davangere.
- ಶ್ರೀಮತಿ ಶೈಲಜ ಡಾ|| ಮಂಜುನಾಥ್ ಆಲೂರು, B.S.C. Home Science Diabetic Nutritionist
- ಶ್ರೀಮತಿ ಗಂಗಾಂಭಿಕಾ ಡಾ|| ಪ್ರಭಾಕರ್ M.D., Prof. & HOD, OBG, Superintendent, V.A. Medical College, Vankra, Shahajanpur, U.P.
- ಶ್ರೀಮತಿ ಕವಿತಾ ಶ್ರೀ ವಿಶ್ವನಾಥ್ ಮಾರ್ಗದ, Retd. Additional Comm. Commercial Tax, Bangaluru.
- ಶ್ರೀಮತಿ ಸುಜಾತ ಡಾ|| ಕೆ. ರವೀಂದ್ರ, M.D., Prof. Dermatology, JJM Medical College, Davangere.
- ಶ್ರೀಮತಿ ಅನಿತಾ ಡಾ|| ಕೆ.ಪಿ. ಬಸವರಾಜ್, Prof. & HOD, ENT JJM Medical College, Davangere.
- ಡಾ|| ವರುಣ ಚಂದ್ರ ಆಲೂರು, (Endo specialist) Assistant Professor, JJM Medical College
- ಡಾ|| ವರ್ಷಿತ ವರುಣ್ ಆಲೂರು, O.B.G. IVF Specialist
- ಪ್ರಿಯಾಂಕ ಆಲೂರು, ಹೇಮಂತ್ ಬಸಪ್ಪ, B.E. M.S. USA
- ಶ್ರೀ ಕಿರಣ್ ಚಂದ್ರ ಆಲೂರು, B.E., M.S., UK
  Alur Agro Industries, Max cloud Enterprises, Bangalore. Dominus HealthCare Pvt Ltd., Bengaloru B.E., M.S.
- ಶ್ರೀಮತಿ ಹರ್ಷಿಣಿ ಕಿರಣ್ ಚಂದ್ರ ಆಲೂರು, B.E. MBA USA Alur Enterprises
- ವರುಣ್ ಡಯಾಗ್ನಾಸ್ಟಿಕ್ ಲ್ಯಾಬೋರೇಟರಿ ಸಿಬ್ಬಂದಿ ವರ್ಗ
- ಆಲೂರು ಎಂಟರ್ ಪ್ರೈಸಸ್ ಮತ್ತು ಆಲೂರು ಆಗ್ರೋ ಫುಡ್ ಕಾರ್ಪೋರೇಷನ್ ಸಿಬ್ಬಂದಿ ವರ್ಗ
- ಆಲೂರು ಫರ್ಟಿಲಿಟಿ ಸೆಂಟರ್
- ಆಲೂರು ಆಸ್ಪತ್ರೆ ಹಾಗೂ ಸಿಬ್ಬಂದಿ ವರ್ಗ
- ಆಲೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

ಮರಿ ಮೊಮ್ಮಕ್ಕಳು : ಆರ್ನ ವಿ.ಆಲೂರು, ಅವಿರಾ ವಿ. ಆಲೂರು, ಈಶಾನ್ ಹೇಮಂತ್ ಬಸಪ್ಪ